ಸಂಪುಟ : 8 ಸಂಚಿಕೆ : 222 ಪುಟ : 4 ಬೆಲೆ : 3.00 ರವಿವಾರ ಅಕ್ಟೋಬರ್ 08, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 222 Pages : 4 Price : 3.00 Sunday October 08, 2023 Gadag RNI No: KARKAN/2015/63412 E-mail: vijayasakshidaily@gmail.com Post Regn.No: GDG/72/2023-25

## ಗದಗ-ಬೆಟಗೇರಿ ಅವಳಿ ನಗರದಲ್ಲಿ ಇಂದು ನೀರು ಪೂರೈಕೆ ಎಲ್ಲೆಲ್ಲಿ?

■ **ವಿಜಯಸಾಕ್ಷಿ ಸುದ್ದಿ, ಗದಗ**

ಗದಗ ಬೆಟಗೇರಿ ಅವಳಿ ನಗರದಲ್ಲಿ ಅಕ್ಟೋಬರ್ 7 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

**ಸ್ಥಳಗಳ ವಿವರ:** ವಾರ್ಡ್ ನಂ. 23 ಹಾರೋಗೇರಿ ಭಾಗ 1 ಭಾಗ 2, ಕಗನಳ್ಳಿಯವರ ಲೈನ್, ಹೆಬ್ಬುರ ಲೈನ್, ಹೊನ್ನೆತ್ತಮ್ಮನಗುಡಿ ಭಾಗ 1 ಭಾಗ 2, ಸೋಮನಗೌಡ್ರ ಲೈನ್, ಕಮತರ ರವರ ಲೈನ್, ಕಾಳಮ್ಮನ ಗುಡಿ ಲೈನ್, ವಿಭೂತಿಯವರ ಲೈನ್, ಹನುಮಾನ ಗುಡಿ, ದ್ರವಪತಿ ಬಾಯಿ ಲೈನ್, ಜಂತ್ಲಿಯವರ ಲೈನ್, ದ್ಯಾಮವನ ಕಟ್ಟಿ, ಉಸಗಿನಕಟ್ಟಿ, ಕುಂಬಾರ ಲೈನ್, ಜಂತ್ಲಿಯವರ ಹಳೆ ಲೈನ್, ವಾರ್ಡ್ ನಂ. 1 ಎಸ್ ಎಂ ಕೃಷ್ಣನಗರ ಮೇಲಿನ ಭಾಗ ಕೆಳಗಿನ ಭಾಗ, ಯಮನೂರರವರ ಲೈನ್, ಕ್ರಿಶ್ಚಿಯನ್ ಕಾಲೋನಿ ಭಾಗ 1 ಭಾಗ 2, 18 ಮೀಟರ್ ರೋಡ್, ಆಟೋ ಕಾಲೋನಿಯ ಕೆಲವು ಭಾಗಗಳು.

ವಾರ್ಡ್ ನಂ. 22 ತಾಜ್ ನಗರ, ಅಮರೇಶ್ವರ ನಗರದ ಕೆಲವು ಭಾಗಗಳು, ವಾರ್ಡ್ ನಂ 29 ಡಂಬಳವರ ಲೈನ್, ಭಾಂಡಗೆ ಲೈನ್, ವಾರ್ಡ್ ನಂ 5 ನರಸಾಪುರ ಆಶ್ರಯ ಕಾಲೋನಿ ಕೆಲವು ಭಾಗಗಳು, ವಾರ್ಡ್ ನಂ 27 ವೀರನಾರಾಯಣ ಬಡಾವಣೆ, ಹಮಾಲರ ಪ್ಲಾಟ್ ಕೆ. ಹೆಚ್. ಪಾಟೀಲ್ ಬಡಾವಣೆ, ಸ್ಟೇಡಿಯಂ ಲೈನ್, ಕುರುಡಗಿ ದಾವಾಖಾನೆ ಲೈನ್, ವಾರ್ಡ್ ನಂ 28 ನಂದೀಶ್ವರ ಮಠದ ಹಿಂದಿನ ಭಾಗ, ಸಜ್ಜನ ಕುಲಕರ್ಣಿ ಲೈನ್, ಕಮ್ರಳ್ಳಿ ಮಠದ ಲೈನ್, ಸಿ ಎಸ್ ಪಾಟೀಲ್ ಲೈನ್, ನಾಗರಕಟ್ಟಿ ಮಲ್ಲಾಡದರ ಲೈನ್ ರೊಟ್ಟಿ ಲೇಔಟ್, ಹೊಸಮನಿ ಸರ್ ಲೈನ್ ಕೆಲವು ಉಳಿದ ಭಾಗಗಳು. ತಾಂತ್ರಿಕವಾಗಿ ನೀರು ಪೂರೈಕೆಯಲ್ಲಿ ಒಂದು ವೇಳೆ ಅಡತಡೆಯಾದಲ್ಲಿ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸ ಬೇಕೆಂದು ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅರ್ಜಿ ಆಹ್ವಾನ

■ **ವಿಜಯಸಾಕ್ಷಿ ಸುದ್ದಿ, ಗದಗ**

ಪ್ರಸಕ್ತ ಸಾಲಿನ ರಾಷ್ಟ್ರೀಯ ವಿದ್ಯಾರ್ಥಿ ವೇತನದ ಯೋಜನೆಯಡಿ ಗದಗ ಜಿಲ್ಲೆಯಲ್ಲಿ ಪ್ರಿ ಮೆಟ್ರಿಕ್ ಹಾಗೂ ಪೋಸ್ಟ್ ಮೆಟ್ರಿಕ್ ವ್ಯಾಸಂಗ ಮಾಡುತ್ತಿರುವ ವಿಕಲಚೇತನ ವಿದ್ಯಾರ್ಥಿಗಳಿಂದ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ವಿಕಲಚೇತನ ವಿಧ್ಯಾರ್ಥಿಗಳು ಪ್ರಿ ಮೆಟ್ರಿಕ್ ಅರ್ಜಿಯನ್ನು ನವಂಬರ್ 30 ರೊಳಗೆ ಹಾಗೂ ಪೋಸ್ಟ್ ಮೆಟ್ರಿಕ್ ಮತ್ತು ಟಾಪ್ ಕ್ಲಾಸ್‌ಗಳ ವಿದ್ಯಾರ್ಥಿ ವೇತನಕ್ಕೆ ಡಿಸೆಂಬರ 31 ರೊಳಗೆ ಆನ್‌ಲೈನ್ ಮೂಲಕ https://scholarships.gov.in/ ತಂತ್ರಾಂಶದಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ.

ಅರ್ಜಿ ಸಲ್ಲಿಸಿದ ಒಂದು ಪ್ರತಿಯನ್ನು ತಮ್ಮ ವ್ಯಾಪ್ತಿಯ ವಿ.ಆರ್.ಡಬ್ಲ್ಯು , ಯು.ಆರ್.ಡಬ್ಲ್ಯು , ಎಲ್.ಆರ್.ಡಬ್ಲ್ಯು ಇವರಲ್ಲಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಗದಗ ಖಾಜಾಹುಸೇನ ಕಾತರಕಿ– 8867556465, ರೋಣ ಬಸವರಾಜ ಓಲಿ– 9741615926, ಮುಂಡರಗಿ– ಶಶಿಕಲಾ ವಡ್ಡಟ್ಟಿ– 9611922445, ಶಿರಹಟ್ಟಿ– ಭಾರತಿ ಮುರಶಿಳ್ಳಿ– 8951128679, ನರಗುಂದ– ಶಿವಾನಂದ ಹಾದಿಮನಿ, 9591679022 ಹಾಗೂ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಗದಗ ಜಿಲ್ಲಾಡಳಿತ ಭವನ, ರೂಮ್ ನಂ:29ರಲ್ಲಿನ ದೂರವಾಣಿ ಸಂಖ್ಯೆ 08372–220419ಗೆ ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

### ಶಾಸಕ ಡಾ. ಚಂದ್ರು ಲಮಾಣಿ ವಿರುದ್ಧ ರೈತ ಸಂಘಟನೆಗಳ ಆಕ್ರೋಶ

# ಕಾಣೆಯಾದ ಶಾಸಕರನ್ನು ಹುಡುಕಿಕೊಡಿ!

■ **ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಶಿರಹಟ್ಟಿ ಕ್ಷೇತ್ರದ ಶಾಸಕ ಡಾ.ಚಂದ್ರು ಲಮಾಣಿ ಕಾಣೆಯಾಗಿದ್ದು, ಅವರನ್ನು ಹುಡುಕಿಕೊಡುವಂತೆ ಆಗ್ರಹಿಸಿ ಶುಕ್ರವಾರ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಮನವಿ ಸಲ್ಲಿಸಿದ್ದ ಪಕ್ಷಾತೀತ ರೈತ ಪರ ಹೋರಾಟ ವೇದಿಕೆ ಅಧ್ಯಕ್ಷ ಮಹೇಶ ಹೊಗೆಸೊಪ್ಪಿನ ಅವರ ನೇತೃತ್ವದಲ್ಲಿ ಶನಿವಾರ ರೈತ ವಿರೋಧಿ ಶಾಸಕರು ಕ್ಷೇತ್ರದಿಂದ ಕಾಣೆಯಾಗಿದ್ದಾರೆ, ಅವರನ್ನು ಹುಡುಕಿಕೊಡುವಂತೆ ಆಗ್ರಹಿಸಿ ಹೋರಾಟ ವೇದಿಕೆ ಹಾಗೂ ವಿವಿಧ ಸಂಘಟನೆಗಳು ಪ್ರತಿಭಟನೆ ನಡೆಸಿದರು.

ಪಟ್ಟಣದ ಹಾವಳಿ ಹನುಮಂತದೇವರ ದೇವಸ್ಥಾನದಿಂದ ಪ್ರಾರಂಭವಾದ ಮೆರವಣಿಗೆಯು ಮುಖ್ಯ ರಸ್ತೆಯಲ್ಲಿ ಹಾಯ್ದು ಹೊಸ ಬಸ್‌ನಿಲ್ದಾಣದ ಎದುರಿನಲ್ಲಿ ಸೇರಿ



ಪ್ರತಿಭಟನೆ ನಡೆಸಿ, ರೈತ ವಿರೋಧಿ ಶಾಸಕ ಡಾ.ಚಂದ್ರು ಲಮಾಣಿ ಅವರ ವಿರುದ್ಧ ಘೋಷಣೆಗಳನ್ನು ಕೂಗಿ ಅಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ಮಹೇಶ ಹೊಗೆಸೊಪ್ಪಿನ, ಕ್ಷೇತ್ರದಲ್ಲಿ ಬರಗಾಲ ತಾಂಡವವಾಡುತ್ತಿದೆ. ಶುಕ್ರವಾರ ಕ್ಷೇತ್ರದಲ್ಲಿ ಕೇಂದ್ರ ಬರಗಾಲ ಅಧ್ಯಯನ ತಂಡ ಆಗಮಿಸಿದ ಸಂದರ್ಭದಲ್ಲಿ ವಿದ್ಯಾವಂತರಾಗಿರುವ ಶಾಸಕರು ಸ್ಥಳದಲ್ಲಿ ಹಾಜರಿದ್ದು ಕೇಂದ್ರ ತಂಡಕ್ಕೆ ಇಲ್ಲಿನ ಬರಗಾಲದ ಸ್ಥಿತಿಯ ಬಗ್ಗೆ ಮನವರಿಕೆ ಮಾಡಿಕೊಡಬೇಕಾಗಿತ್ತು. ಆದರೆ, ಇದಾವುದನ್ನೂ ಮಾಡದ ಶಾಸಕರು ಈ ಸಮಯದಲ್ಲಿ ಸ್ಥಳದಲ್ಲಿರದೆ, ರೈತ ನೋವಿಗೆ ಸ್ಪಂದಿಸುವ ಕಾರ್ಯವನ್ನು ಮಾಡದೇ ಮೀಟಿಂಗ್ ಎನ್ನುವ ನೆಪದಲ್ಲಿ ಬೇರೆಡೆ ಹೋಗಿರುವದು ಎಷ್ಟು ಸೂಕ್ತ ಎಂದು ಪ್ರಶ್ನಿಸಿದರು.

ಕಳೆದ ಆಗಸ್ಟ್ ತಿಂಗಳಲ್ಲಿ ಅನೇಕ ರೈತ ಸಂಘಟನೆಗಳು ಲಕ್ಷ್ಮೇಶ್ವರ ಬಂದ್ ಮಾಡಿದ ಸಂದರ್ಭದಲ್ಲಿ ರೈತ ಹೋರಾಟಕ್ಕೆ ಬೆಂಬಲ ನೀಡದೆ ಅವಮಾನ ಮಾಡಿದ್ದಲ್ಲದೆ ನಂತರ ಅವರ ಬೆಂಬಲಿಗರು ಹೋರಾಟಗಾರರಿಗೆ ಬೆದರಿಕೆ ಹಾಕುವ ಕಾರ್ಯವನ್ನು ಮಾಡಿದ್ದು, ಇದನ್ನು ಖಂಡಿಸಿ ರೈತರು ಪತ್ರಿಕೆ ಮುಖಾಂತರ ಕ್ಷಮೆಯಾಚನೆ ಮಾಡಲು ಆಗ್ರಹಿಸಿದ್ದರೂ ಸಹ ಅವರು ರೈತರ ಕ್ಷಮೆಯಾಚಿಸಿಲ್ಲ ಎಂದು ಆರೋಪಿಸಿದರು.

ರೈತರು ಕಪ್ಪು ಬಾವುಟ ಹಾಗೂ ಕಪ್ಪು ಶಾಲು ಹಾಕಿ ಪ್ರತಿಭಟನೆ ನಡೆಸಿದರು. ಈ ಸಂದರ್ಭದಲ್ಲಿ ರೈತ ಮುಖಂಡರಾದ ಚನ್ನಪ್ಪ ಷಣ್ಮುಖಿ, ಶಿವಾನಂದ ಲಿಂಗಶೆಟ್ಟಿ, ಆನಂದ ಅಮರಶೆಟ್ಟಿ, ಖಾನಸಾಬ ಸೂರಣಗಿ, ಬಸವರಾಜ ಕರೆಯತ್ತಿನ ಸೇರಿದಂತೆ ಅನೇಕರಿದ್ದರು.

> ಶಾಸಕ ಡಾ.ಚಂದ್ರು ಲಮಾಣಿಯವರ ನಡವಳಿಕೆ ಬಗ್ಗೆ ಮಾಜಿ ಮುಖ್ಯಮಂತ್ರಿ ಬೊಮ್ಮಾಯಿಯವರಿಗೆ ದೂರು ನೀಡಿದ್ದರೂ ಪಕ್ಷದ ಮುಖಂಡರಾಗಿ ಅವರು ಯಾವುದೇ ಕ್ರಮವನ್ನು ಕೈಗೊಳ್ಳದಿರುವದು ವಿಪರ್ಯಾಸವಾಗಿದೆ. ಶಾಸಕರ ರೈತ ವಿರೋಧಿ ನಡುವಳಿ ವಿರುದ್ಧ ಇನ್ನು ಮುಂದೆ ಉಗ್ರ ಹೋರಾಟಗಳನ್ನು ಪ್ರಾರಂಭಿಸಲಾಗುವದು. ಕ್ಷೇತ್ರದ ಕಾಳಜಿ ಇರುವ ಶಾಸಕರು ಕ್ಷೇತ್ರದಲ್ಲಿ ಇಲ್ಲದಿರುವದರಿಂದ ಅವರನ್ನು ಹುಡುಕಿಕೊಡುವಂತೆ ಮನವಿ ಮಾಡಲಾಗಿದೆ ಎಂದು ಮಹೇಶ ಹೊಗೆಸೊಪ್ಪಿನ ಹೇಳಿದರು.

### ನಾಳೆ ಗಾಂಧಿಸ್ಮೃತಿ, ವ್ಯಸನಮುಕ್ತ ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಆಯೋಜನೆ

# ಸ್ವಾಸ್ಥ್ಯ ಕುಟುಂಬ, ಉತ್ತಮ ಸಮಾಜ ನಿರ್ಮಾಣದ ಸಂಕಲ್ಪ

■ **ವಿಜಯಸಾಕ್ಷಿ ಸುದ್ದಿ, ಗದಗ**

ಗಾಂಧಿ ಜಯಂತಿ ಅಂಗವಾಗಿ ಅ. 9ರಂದು ಗಾಂಧಿಸ್ಮೃತಿ, ವ್ಯಸನಮುಕ್ತ ಸಾಧಕರಿಗೆ ಅಭಿನಂದನೆ ಮತ್ತು ಪದಗ್ರಹಣ ಕಾರ್ಯಕ್ರಮವು ನಗರದ ಕೆ.ಎಚ್ ಪಾಟೀಲ ಸಭಾಭವನದಲ್ಲಿ ಬೆಳಿಗ್ಗೆ 11 ಗಂಟೆಗೆ ಜರುಗಲಿದೆ ಎಂದು ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಜಿಲ್ಲಾಧ್ಯಕ್ಷ ಎಚ್.ಬಿ ಅಸೂಟಿ ಹೇಳಿದರು.

ನಗರದ ಪತ್ರಿಕಾಭವನದಲ್ಲಿ ಶನಿವಾರ ಕರೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿಸಿ ಟ್ರಸ್ಟ್, ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಟ್ರಸ್ಟ್ ಬೆಳ್ತಂಗಡಿ, ಅಖಿಲ ಕರ್ನಾಟಕ ಜಿಲ್ಲಾ ಜನಜಾಗೃತಿ ವೇದಿಕೆ ಜಿಲ್ಲಾ ಘಟಕ ಹಾಗೂ ಜಿಲ್ಲಾ ಪೊಲೀಸ್ ಇಲಾಖೆ



ಸಹಯೋಗದಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಕಾರ್ಯಕ್ರಮದ ದಿವ್ಯಸಾನ್ನಿಧ್ಯವನ್ನು ತೋಂಟದ ಡಾ. ಸಿದ್ದರಾಮ ಮಹಾಸ್ವಾಮಿಗಳು ವಹಿಸಲಿದ್ದಾರೆ. ಉದ್ಘಾಟನೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಕೆ ಪಾಟೀಲ ನೆರವೇರಿಸಲಿದ್ದಾರೆ. ಜಿಲ್ಲಾ ಜನಜಾಗೃತಿ ವೇದಿಕೆಯ ಅಧ್ಯಕ್ಷ ಎಚ್.ಬಿ ಅಸೂಟಿ ಅಧ್ಯಕ್ಷತೆ ವಹಿಸಲಿದ್ದಾರೆ.

ಗಾಂಧೀಜಿಯವರ ಭಾವಚಿತ್ರಕ್ಕೆ ಮಾಲಾರ್ಪಣೆಯನ್ನು ಮಾಜಿ ಶಾಸಕ ಡಿ.ಆರ್ ಪಾಟೀಲ ನೆರವೇರಿಸಲಿದ್ದಾರೆ. ಪಾನಮುಕ್ತರಿಗೆ ಅಭಿನಂದನೆಯನ್ನು ಜಿಲ್ಲಾಧಿಕಾರಿ ವೈಶಾಲಿ ಎಮ್.ಎಲ್ ಅವರು ನಡೆಸಿಕೊಡಲಿದ್ದಾರೆ. ಪದಗ್ರಹಣವನ್ನು ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆಯ ರಾಜ್ಯಾಧ್ಯಕ್ಷ ರಾಜಣ್ಣ ಕೊರವಿ ನಡೆಸಿಕೊಡಲಿದ್ದಾರೆ. ಕೊಪ್ಪಳದ ಪ್ರಾದೇಶಿಕ ನಿರ್ದೇಶಕರಾದ ಗಣೇಶ.ಬಿ ಆಶಯ ಭಾಷಣವನ್ನು ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್ ನೇಮಗೌಡ, ನಗರಸಭೆ ಅಧ್ಯಕ್ಷೆ ಉಷಾ ದಾಸರ, ಜನಜಾಗೃತಿ ವೇದಿಕೆಯ ನಿಕಟಪೂರ್ವ ಅಧ್ಯಕ್ಷ ಶಿವಪ್ರಕಾಶ ಮಹಾಜನಶೆಟ್ಟರ್ ಆಗಮಿಸಲಿದ್ದಾರೆ. ಇದಕ್ಕೂ ಮುನ್ನ ಬೆಳಿಗ್ಗೆ 9 ಗಂಟೆಗೆ ಶ್ರೀ ತೋಂಟದಾರ್ಯ ಮಠದಿಂದ ಜಾಗೃತಿ ಜಾಥಾ ನಡೆಯಲಿದೆ. ಈ ಜಾಥಾ ಕಾರ್ಯಕ್ರಮಕ್ಕೆ ಡಿವೈಎಸ್‌ಪಿ ಎಂ.ಬಿ ಸಂಕದ ಚಾಲನೆ ನೀಡಲಿದ್ದಾರೆ ಎಂದು ಎಚ್.ಬಿ ಅಸೂಟಿ ಮಾಹಿತಿ ನೀಡಿದರು.

ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜಿಲ್ಲಾ ನಿರ್ದೇಶಕ ಯೋಗೀಶ್ ಎ. ಮಾತನಾಡಿ, ಶ್ರೀಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ▸▸3ನೇ ಪುಟಕ್ಕೆ

> ಸರ್ಕಾರಕ್ಕೆ ಪ್ರತಿವರ್ಷ ಹೊಸದಾಗಿ ಮದ್ಯದಂಗಡಿ ತೆರೆಯದಂತೆ ಹಾಗೂ ಇರುವ ಅಂಗಡಿಗಳನ್ನು ಕಡಿಮೆ ಮಾಡುವಂತೆ ವೇದಿಕೆಯು ಹಕ್ಕೊತ್ತಾಯವನ್ನು ಮಾಡುತ್ತಿದೆ. ಆದರೂ ಸರ್ಕಾರವು ಹೊಸದಾಗಿ ಮದ್ಯದಂಗಡಿಗಳನ್ನು ತೆರೆಯಲು ಅನುಮತಿ ನೀಡುತ್ತಿರುವುದು ವಿಷಾದನೀಯ. ಸರ್ಕಾರವು ಈ ವರ್ಷವೂ 1 ಸಾವಿರ ಮದ್ಯದಂಗಡಿಗಳನ್ನು ತೆರೆಯಲು ಅನುಮತಿ ನೀಡುತ್ತಿರುವುದನ್ನು ವೇದಿಕೆಯು ಖಂಡಿಸುತ್ತದೆ.
>
> **– ಎಚ್.ಬಿ ಅಸೂಟಿ.**
> ಅಧ್ಯಕ್ಷರು, ಜನಜಾಗೃತಿ ವೇದಿಕೆ.

### ಚಂದ್ರಯಾನ-3 ಕುರಿತು ವಿಜ್ಞಾನಿ ಸುಧೀಂದ್ರ ಬಿಂದಗಿ ಅವರಿಂದ ಉಪನ್ಯಾಸ

# ಚಂದ್ರಯಾನ-3 ಯಶಸ್ವಿ, ಹೊಸ ಅನ್ವೇಷಣೆಗೆ ಹುರುಪು



> ಚಂದ್ರಯಾನ-3ರ ಯಶಸ್ವಿಗಾಗಿ ಸುಧೀರ್ಘ ನಾಲ್ಕು ವರ್ಷಗಳ ಕಾಲ ನಿರಂತರ ಶ್ರಮವಹಿಸಿ ಅತ್ಯಾಧುನಿಕ ತಾಂತ್ರಿಕ ಯಂತ್ರಗಳ ಸಹಾಯದಿಂದ ತಯಾರಿಸಿ ಉಪಗ್ರಹವನ್ನು ಶ್ರೀ ಹರಿಕೋಟಾದಿಂದ ಉಡಾವಣೆ ಮಾಡಲಾಯಿತು. ಈ ಚಂದ್ರಯಾನ-3ರ ವಿಕ್ರಮ ಬಾಹ್ಯಾಕಾಶವನ್ನು ಐದ ಲಕ್ಷ ಕಿ.ಮೀ. ದೂರದಿಂದ ವಿಜ್ಞಾನಿಗಳು ಇಲ್ಲಿಯೇ ಕುಳಿತು ನಿಯಂತ್ರಿಣ ಮಾಡುವುದು ಸೇರಿದಂತೆ ಎಲ್ಲ ತರಹದ ತಾಂತ್ರಿಕ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿತ್ತು.
>
> **–ಸುಧೀಂದ್ರ ಬಿಂದಗಿ,** ವಿಜ್ಞಾನಿಗಳು.

> ಕರ್ನಾಟಕ ರಾಜ್ಯದ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಯಲ್ಲಿ ರಾಜ್ಯ ಸರ್ಕಾರವು ಚಂದ್ರಯಾನ ಪ್ರಯೋಗಕ್ಕಾಗಿ ಸಾವಿರ ಎಕರೆ ಜಮೀನನ್ನು ನೀಡಿತ್ತು. ಆ ಜಮೀನಿನಲ್ಲಿ ಚಂದ್ರನಲ್ಲಿರುವ ವಾತಾವರಣವನ್ನು ನಿರ್ಮಿಸಿ ಮೊದಲು ಪ್ರಯೋಗ ಮಾಡಿ ನಂತರ ಚಂದ್ರಯಾನ ಉಪಗ್ರಹವನ್ನು ಉಡಾವಣೆ ಮಾಡಲಾಯಿತು. ಚಂದ್ರಯಾನ ಉಪಗ್ರಹ ಉಡಾವಣೆಯಲ್ಲಿ ಕರ್ನಾಟಕ ಸರ್ಕಾರದ ಪಾತ್ರವು ಅಪಾರವಾಗಿದೆ ಎಂದು ಸುಧೀಂದ್ರ ಬಿಂದಗಿ ಸ್ಮರಿಸಿದರು.



■ **ವಿಜಯಸಾಕ್ಷಿ ಸುದ್ದಿ, ಗದಗ**

ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತದ ಚಂದ್ರಯಾನ-3 ಯಶಸ್ವಿಯು ದೇಶದ 140 ಕೋಟಿ ಭಾರತೀಯರ ಇಚ್ಛೆ ಈಡೇರಿದಂತಾಗಿದೆ. ಈ ಯಶಸ್ವಿಯು ಭಾರತವನ್ನು ಇತಿಹಾಸದ ಪುಟಗಳಲ್ಲಿ ಅಜರಾಮರವಾಗಿಸಿದೆ ಎಂದು ವಿಜ್ಞಾನಿ ಸುಧೀಂದ್ರ ಬಿಂದಗಿ ನುಡಿದರು.

ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ನಲ್ಲಿ ಶನಿವಾರ ಏರ್ಪಡಿಸಿದ್ದ ಚಂದ್ರಯಾನ-3 ಕುರಿತು ಉಪನ್ಯಾಸ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಭಾರತದ ಪ್ರತಿಯೊಂದು ತಾಯಿಯು ತನ್ನ ಮಗು ಅಳುತ್ತಿದ್ದರೆ ಆ ಮಗುವನ್ನು ಆಕಾಶಕ್ಕೆ ಮುಖ ಮಾಡಿ ಚಂದಿರನನ್ನು ತೋರಿಸಿ ಚಂದ ಮಾಮನ ನೋಡು ಅಂತ ಹೇಳುತ್ತಾಳೆ. ತಲೆತಲಾಂತರದಿಂದಲೂ ಚಂದ್ರನೊಂದಿಗೆ ಭಾರತೀಯರು ಅವಿನಾಭಾವ ಸಂಬಂಧ ಹೊಂದಿದೆ. ನಮ್ಮ ಭಾರತದ ವಿಜ್ಞಾನಿಗಳು ಚಂದ್ರನ ಮೇಲೆ ಭಾರತದ ಬಾವುಟವನ್ನು ಹಾರಿಸುವುದರ ಮೂಲಕ ಜಗತ್ತಿಗೆ ಭಾರತದ ವಿಜ್ಞಾನಿಗಳ ಶಕ್ತಿ ಎಂತಹದು ಎಂದು ಜಗತ್ತಿಗೆ ಪರಿಚಯಿಸಿದೆ.

ಚಂದ್ರನ ಮೇಲೆ ವಿಕ್ರಮ ಲ್ಯಾಂಡ್ ಆಗುವವರೆಗೂ ಭಾರತದ ಜನರು ದೇವರ ಬಳಿ ಪ್ರಾರ್ಥನೆ ಮಾಡಿದ್ದನ್ನು ನಾವು ಸಹ ನೋಡಿದ್ದೆವೆ. ನಂಬಿದ ದೇವರು ಎಂದು ನಮ್ಮನು ಕೈ ಬಿಡಲಾರ, ಎಂತಹುದೆ ಕೆಲಸಗಳು ಇರಲಿ ಆತ್ಮವಿಶ್ವಾಸ ಮುಖ್ಯ ಎಂದಿಗೂ ಸಹ ಧೃತಿಗೆ ಡಬಾರದು ಎಂದು ಹೇಳಿದರು.

ಚಂದ್ರಯಾನ 3 ರ ವಿಕ್ರಮ ಲ್ಯಾಂಡರನ ಕೊನೆಯ ಇಪ್ಪತ್ತು ನಿಮಿಷ ಬಾಕಿ ಇರುವ ಸಂದೇಶ ಭಾರತದ 140 ಕೋಟಿ ಜನರ ನಿದ್ರೆಯನ್ನು ಮಾಡಲು ಸಹ ಬಿಡಲಾರದ ಹಾಗೇ ಮಾಡಿತು, ಕೊನೆಯಲ್ಲಿ ಆ ದೈವ ಬಲ ಹಾಗೂ ವಿಜ್ಞಾನ ತಂತ್ರಜ್ಞಾನ ಎಲ್ಲರ ಕನಸನ್ನು ನನಸು ಮಾಡಿತು. ಭೂಮಿಯ ಸುತ್ತ ಸುತ್ತಲೂ ಚಂದ್ರನಿಗೆ 15 ದಿನಗಳ ಕಾಲ ಬೇಕು ಅಂತದರಲ್ಲಿ ನಮ್ಮ ಇಸ್ರೋ ಸಂಸ್ಥೆಯ ವಿಜ್ಞಾನಿಗಳು ಚಂದ್ರನ ಮೇಲೆ ವಿಕ್ರಮ ಲ್ಯಾಂಡರ್ ಸುಗಮವಾಗಿ ಕಾಲಿಡಲು ಹಗಲು ರಾತ್ರಿ ಶ್ರಮಪಟ್ಟಿದ್ದಾರೆ ಎಂದು ತಿಳಿಸಿದರು.

ಚಂದ್ರಯಾನದ ಮೇಲೆ ರಷ್ಯಾ ತುದಿಗಾಲಲ್ಲಿ ನಿಂತಿತ್ತು. ಆದರೆ ವಿಪರ್ಯಾಸವೆಂದರೆ ಲ್ಯಾಂಡ ಆಗುವ ಸಮಯದಲ್ಲಿ ಲ್ಯಾಂಡ್ ರ ಚಿದ್ರವಾಗಿ ಪತ್ತೆ ಸಿಗದ ಹಾಗೇ ಹೋಗಿದೆ. ಜಗತ್ತಿನ ದೊಡ್ಡಣ್ಣ ಅಮೇರಿಕವು ಸಹ ಚಂದ್ರನ ಮೇಲೆ ಕಾಲಿಡಲು ಕನಸು ಕಂಡಿತ್ತು. ಆದರೆ ಯಾವುದೇ ಫಲಕಾರಿಯಾಗಲಿಲ್ಲ. ಭಾರತ 2014 ರಲ್ಲಿ ಚಂದ್ರಯಾನ 2 ಯಶಸ್ವಿಗೆ ತುದಿಗಾಲಲ್ಲಿ ನಿಂತಿತ್ತು ಆದರೆ ಫಲಕಾರಿಯಾಗಲಿಲ್ಲ. ನಂತರ ದೇಶ ಪ್ರಧಾನಿ ನರೇಂದ್ರ ಮೋದಿ ಅವರು ಇಸ್ರೋ ಸಂಸ್ಥೆಯ ವಿಜ್ಞಾನಿಗಳಿಗೆ ಪ್ರೋತ್ಸಾಹಿಸಿದರು. ಆಗಸ್ಟ್ 25 ರಂದು ▸▸3ನೇ ಪುಟಕ್ಕೆ

## ನಾಳೆ ಹಿಂದೂ ಮಹಾಗಣಪತಿ ವಿಸರ್ಜನೆ



■ **ವಿಜಯಸಾಕ್ಷಿ ಸುದ್ದಿ, ಗದಗ**

ನಗರದ ಹಳೆ ಬಸ್ ನಿಲ್ದಾಣದ ಬಳಿ ಪ್ರತಿಷ್ಠಾಪನೆಗೊಂಡಿರುವ ಹಿಂದೂ ಮಹಾಗಣಪತಿಯ ವಿಸರ್ಜನಾ ಕಾರ್ಯಕ್ರಮವನ್ನು ಅ.9ರಂದು ಹಮ್ಮಿಕೊಳ್ಳಲಾಗಿದೆ ಎಂದು ಧಾರವಾಡ ವಿಭಾಗದ ಶ್ರೀರಾಮ ಸೇನಾ ಸಂಚಾಲಕ ರಾಜು ಖಾನಪ್ಪನವರ ಹೇಳಿದರು.

ನಗರದ ಪತ್ರಿಕಾಭವನದಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಜಿಲ್ಲೆಯಾದ್ಯಂತ ಪ್ರಸಿದ್ಧಿ ಪಡೆದ ಹಿಂದೂ ಮಹಾಗಣಪತಿ ಸಂಘದಿಂದ ಹತ್ತು ಹಲವಾರು ಜನಪರ ಕಾರ್ಯಕ್ರಮ ಮಾಡಲಾಗಿದೆ. ಹಿಂದೂ ಮಹಾಣಪತಿ ವಿಸರ್ಜನೆ ಕಾರ್ಯಕ್ರಮಕ್ಕೆ ಜಿಲ್ಲೆಯ ಹಿಂದೂ ಬಂಧುಗಳು ಸಾವಿರಾರು ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು. ಜಿಲ್ಲೆಯ ವಿವಿಧ ಭಾಗಗಳಿಂದ ಆಗಮಿಸುವ 5 ಸಾವಿರ ಜನರಿಗೆ ಪ್ರಸಾದ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು.

ಖಾನ್‌ತೋಟ ಸಾರ್ವಜನಿಕ ಗಣಪತಿಯು 2018 ರ ನಂತರ ಹಿಂದೂ ಗಣಪತಿ ಎಂದು ಪ್ರಸಿದ್ಧಿ ಪಡೆದಿದೆ. ವಿಸರ್ಜನೆ ದಿನ ಮಾಹಾ ಪುರಷರ ಭಾವಚಿತ್ರ ಮೆರವಣಿಗೆ ಮಾಡಲಾಗುವುದು. ಹಿಂದೂ ಧರ್ಮದಲ್ಲಿ ಇರುವ ಜಾತಿ ವ್ಯವಸ್ಥೆ ಹೋಗಲಾಡಿಸಿ ಎಲ್ಲರೂ ಒಂದು ಎಂಬ ಭಾವನೆ ಮೂಡಿಸುವ ಉದ್ದೇಶದಿಂದ ಮಹಾಪುರುಷರ ಭಾವಚಿತ್ರ ಮೆರವಣಿಗೆ ನಡೆಸಲಾಗುತ್ತಿದೆ. ಅದರಲ್ಲೂ ಪ್ರಮುಖವಾಗಿ ಬಾಲಗಂಗಾಧರ ತಿಲಕ್, ಶಿವಾಜಿ ಮಹಾರಾಜ, ವಾಲ್ಮೀಕಿ, ಮಹಾತ್ಮ ಗಾಂಧೀಜಿ, ಅಂಬೇಡ್ಕರ್ ಸೇರಿದಂತೆ ವಿವಿಧ ಮಾಹಾಪುರುಷರ ಭಾವಿಚಿತ್ರದ ಮೆರವಣಿಗೆ ಮಾಡಲಾಗುತ್ತದೆ. ಅಂದು ಖಾನ್‌ತೋಟ, ವೀರನಾರಾಯಣ ದೇವಸ್ಥಾನ, ಟಾಂಗಾಕೂಟ್ ಮಾರ್ಗವಾಗಿ ಸಂಚರಿಸಿ ಭೀಷ್ಮಕೆರೆಯಲ್ಲಿ ವಿಸರ್ಜನೆ ನಡೆಸಲಾಗುವುದು ಎಂದರು.

ಮಹಾಗಣಪತಿ ವಿಸರ್ಜನೆ ಮೆರವಣಿಯಲ್ಲಿ ನಗರದ ಪೋಷಕರು ತಮ್ಮ ಮಕ್ಕಳಿಗೆ ಬಾಲಗಂಗಾಧರ ತಿಲಕ, ಶಿವಾಜಿ ಮಹಾರಾಜ್ ಸೇರಿದಂತೆ ಇತರ ಮಹಾಪುರುಷರ ವೇಷಭೂಷಣ ತೊಡಿಸಿ ಮೆರವಣಿಗೆಯಲ್ಲಿ ಭಾಗವಹಿಸಿದರೆ ಮೆರವಣಿಗೆಯಲ್ಲಿ ವಿಶೇಷ ಟ್ರ್ಯಾಕ್ಟರ್ ವ್ಯವಸ್ಥೆ ಮಾಡಲಾಗಿದ್ದು, ಟ್ರ್ಯಾಕ್ಟರ್‌ನಲ್ಲಿ ಅವಕಾಶ ಮಾಡಲಾಗುವುದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಹಿಂದೂ ಮಹಾಗಣಪತಿ ಸಮಿತಿ ಕಾರ್ಯದರ್ಶಿ ಮಾಹಾಂತೇಶ ನಲವಡಿ, ಸಂಗಮೇಶ ಕವಳಿಕಾಯಿ, ರವಿ ಕರಬಸಣ್ಣವರ, ರವಿ ಹರ್ತಿ, ಕಿರಣ ಹಿರೇಮಠ, ಸತೀಶ ಕುಂಬಾರ ಇದ್ದರು.

## ಅ.12ರಂದು ಪೂರ್ವಭಾವಿ ಸಭೆ

■ **ವಿಜಯಸಾಕ್ಷಿ ಸುದ್ದಿ, ಗದಗ**

ಅಕ್ಟೋಬರ್ 28 ರಂದು ಮಹರ್ಷಿ ವಾಲ್ಮೀಕಿರವರ ಜನ್ಮ ದಿನಾಚರಣೆ ಆಚರಿಸುವ ಸಂಬಂಧವಾಗಿ ಪೂರ್ವಭಾವಿ ಸಭೆಯನ್ನು ಆಯೋಜಿಸಲಾಗಿದೆ. ಅಕ್ಟೋಬರ್ 12 ರಂದು ಬೆಳಿಗ್ಗೆ 11.00 ಗಂಟೆಗೆ ಜಿಲ್ಲಾಡಳಿತ ಭವನದ ಅಡಿಟೋರಿಯಂ ಹಾಲ್‌ನಲ್ಲಿ ಪೂರ್ವಭಾವಿ ಸಭೆ ಜರುಗಲಿದ್ದು ಸದರಿ ಸಭೆಗೆ ಜಿಲ್ಲಾ ಮಟ್ಟದ ಅಧಿಕಾರಿಗಳು, ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗ/ ಹಿಂದುಳಿದ ವರ್ಗ ಹಾಗೂ ಸಮಾಜದ ಮುಖಂಡರು, ಸರ್ವ ಸದಸ್ಯರು, ಗಣ್ಯ ವ್ಯಕ್ತಿಗಳು, ಸಂಘ ಸಂಸ್ಥೆಯ ಪದಾಧಿಕಾರಿಗಳು ಸಕಾಲಕ್ಕೆ ಸಭೆಗೆ ಆಗಮಿಸಿ ತಮ್ಮ ಸಲಹೆ ಸೂಚನೆಗಳನ್ನು ನೀಡುವಂತೆ ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

## ಸಾಕ್ಷಿ ಸುಭಾಷಿತ

ಮಾತಿನಿಂದಲೇ ಸಂಪತ್ತು ಅಡಗಿದೆ.

ಮಾತಿನಿಂದಲೇ ಮಿತ್ರಬಾಂಧವರು ಒದಗುತ್ತಾರೆ

–ಸುಭಾಷಿತ

## ಸಂಪಾದಕೀಯ

### ಲಿಂಗಾಯತರ ಕಡೆಗಣನೆ ಆರೋಪದ ಸುತ್ತ–ಮುತ್ತ

ರಾಜ್ಯದಲ್ಲಿ ಲಿಂಗಾಯತ ಸ್ವತಂತ್ರ ಧರ್ಮದ ಹೋರಾಟ ಮೊಳಕೆಯೊಡೆಯುವ ಮುನ್ನ ಒಮ್ಮೆಯೂ ಲಿಂಗಾಯತ ಶಬ್ದ ಬಳಸದ ಶಾಮನೂರು ಶಿವಶಂಕರಪ್ಪ, ಇವತ್ತು ಅದೇ ಲಿಂಗಾಯತ ಶಬ್ದವನ್ನ ಹಿಡಿದುಕೊಂಡು ಸ್ವಪಕ್ಷದ ವಿರುದ್ಧ ವಾಗ್ದಾಳಿ ನಡೆಸುತ್ತಿದ್ದಾರೆ.

ದಶಕಗಳಿಂದ ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷರಾಗಿ ಸಮಾಜದ ಉನ್ನತಿಗಾಗಿ ಶ್ರಮಿಸುತ್ತಿರುವ ಶಾಮನೂರು ಶಿವಶಂಕರಪ್ಪ, ಲಿಂಗಾಯತ ಮಠಾಧೀಶರು ಸ್ವತಂತ್ರ ಧರ್ಮದ ಹೋರಾಟದ ಮೂಲಕ ಲಿಂಗಾಯತ ಧರ್ಮದ ಪರಿಚಯವನ್ನು ಮಾಡಿಕೊಟ್ಟರು.

ಯಾವಾಗ ಲಿಂಗಾಯತ ಸ್ವತಂತ್ರ ಧರ್ಮದ ಕೂಗು ಹೆಚ್ಚಾಯಿತೊ ಆಗ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಎಂದು ಹೆಸರು ಪರಿಚಯಿಸುವಂತಹ ಕೆಲಸಕ್ಕೆ ಕೈ ಹಾಕಬೇಕಾಯಿತು. ಕೆಲ ವರ್ಷ ಸುಮ್ಮನಿದ್ದ ಶಿವಶಂಕರಪ್ಪ ಈಗ ಅದೇ ಲಿಂಗಾಯತ ಹೆಸರಿನಲ್ಲಿ ರಾಜಕಾರಣ ಮಾಡುತ್ತಿದ್ದಾರೆ.

ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಜಾತಿ– ಧರ್ಮ ಬೆರೆತು ಹೋಗಿದೆ. ಜಾತಿ– ಧರ್ಮ ಇಲ್ಲದೆ ರಾಜಕಾರಣವನ್ನ ಊಹಿಸಿಕೊಳ್ಳುವುದು ಕಷ್ಟ. ಆದರೆ ಅಧಿಕಾರಿಗಳ ಮಟ್ಟದಲ್ಲಿ ಜಾತಿಕಾರಣಕ್ಕೆ ಅಷ್ಟೊಂದು ಮಹತ್ವ ಸಿಕ್ಕಿದ್ದಿಲ್ಲ. ಶಾಮನೂರು ಶಿವಶಂಕರಪ್ಪ ಅವರ ಹೇಳಿಕೆಯಿಂದ ಅಧಿಕಾರಿಗಳಲ್ಲೂ ಜಾತಿ ಹುಡುಕಬೇಕಾದ ಅನಿವಾರ್ಯತೆ ಎದುರಾಗಿದೆ. ಶಾಮನೂರ ಹೇಳಿಕೆಯನ್ನು ಗಂಭೀರವಾಗಿ ಪರಿಗಣಿಸಿ ಅಧಿಕಾರಿಗಳ ಜಾತಿವಾರು ಪಟ್ಟಿ ಬಿಡುಗಡೆ ಮಾಡಿದ ಸರ್ಕಾರ ನಡೆಯೂ ಖಂಡನೀಯ.

ಸರಕಾರ ಅಧಿಕಾರಿಗಳ ಜಾತಿ ಪಟ್ಟಿ ಬಿಡುಗಡೆ ಮಾಡುವುದಕ್ಕಿಂತ, ಶಾಮನೂರ್ ಅವರಿಂದ ಸ್ಪಷ್ಟನೆ ಕೇಳಿ ಯಾವ ರೀತಿ ಲಿಂಗಾಯತರ ಕಡೆಗಣನೆ ಮಾಡಲಾಗಿದೆ ಎನ್ನುವ ಬಗ್ಗೆ ತಿಳಿದುಕೊಳ್ಳುವ ಪ್ರಯತ್ನ ಮಾಡಬೇಕಿತ್ತು. ಇದರಿಂದ ಸರ್ಕಾರಕ್ಕೆ ಮುಜುಗರ ಆಗುವುದನ್ನು ತಪ್ಪಿಸುವ ಜೊತೆಗೆ ಅಧಿಕಾರಿಗಳಿಗೆ ಜಾತಿ ಬಣ್ಣ ಬಳಿಯುವಂತಹ ಕೆಲಸಕ್ಕೆ ಕೈ ಹಾಕುವುದರಿಂದ ತಪ್ಪಿಸಿಕೊಳ್ಳಲು ಸಾಧ್ಯವಿತ್ತು. ಸರ್ಕಾರದ ಆತುರದ ನಿರ್ಧಾರದಿಂದ ಜನ ಅಧಿಕಾರಿಗಳನ್ನು ಸಹ ಜಾತಿ ಧರ್ಮದ ಆಧಾರದ ಮೇಲೆ ನೋಡುವಂತಾಗಿದೆ.

ಮೈಮನಗಳ ಉಲ್ಲಾಸ, ಆರೋಗ್ಯಕ್ಕೆ ನಮ್ಮ ನಿತ್ಯದ ಕಾಯಕಗಳೇ ದೊಡ್ಡ ವ್ಯಾಯಾಮ

# ಉಳಿದ ಚಿಂತೆ ಬಿಡಿ, ಆರೋಗ್ಯಕ್ಕೆ ಗಮನ ನೀಡಿ

ಇಂದು ಬೆಳ್ಳಂಬೆಳಗ್ಗೆ ಪಾರ್ಕ್‌ಗಳಲ್ಲಿ, ಜಿಮ್‌ಗಳಲ್ಲಿ ರಸ್ತೆಗಳಲ್ಲಿ ವಾಕಿಂಗ್, ಜಾಗಿಂಗ್‌ನಂತಹ ವಿವಿಧ ಕಸರತ್ತುಗಳನ್ನು ನಡೆಸುತ್ತ ಫಿಟ್ ಆಗಿರಬೇಕೆಂದು ಬಯಸುವ ನಮ್ಮ ಮನಸ್ಥಿತಿ, ಅನಿವಾರ್ಯತೆಗಳನ್ನು ನೆನೆದರೆ ಒಂದೆಡೆ ಮಜವೆನಿಸುತ್ತದೆ, ಮರುಕವೂ ಆಗದಿರದು! ಯಾಕೆ ಹೇಳಿ? ಇಂಥ ದೈಹಿಕ ವ್ಯಾಯಾಮಗಳ ಅಗತ್ಯತೆ ಹಿಂದಿನ ತಲೆಮಾರುಗಳಲ್ಲಿ ಇದ್ದೇ ಇರಲಿಲ್ಲ! ನಿಜವಲ್ಲವಾ? ಆಗೆಲ್ಲ ಹೀಗೆ ದೇಹದ ಎಲ್ಲ ಅಂಗಾಗಗಳಿಗೆ ಚಟುವಟಿಕೆ ನೀಡುವ ಕೆಲಸಗಳು, ವಾರ್ಮ್‌ಅಪ್ ಆಗುವ ದಿನಚರಿ ಸಾಮಾನ್ಯವೇ ಆಗಿತ್ತು. ದೇಹವನ್ನು ದಂಡಿಸಲೆಂದೇ ವ್ಯಾಯಾಮ ಮಾಡುವವರು, ವಾಕಿಂಗ್/ಜಾಗಿಂಗ್ ಮಾಡುವವರು, ಜಿಮ್‌ಗಳಲ್ಲಿ ಬೆವರು ಹರಿಸುವವರು, ಪಥ್ಯ ಮಾಡುವವರು ಆಗೆಲ್ಲಿದ್ದರು? ಜಿಮ್‌ಗಳಂತೂ ಇರಲೇ ಇಲ್ಲ ಬಿಡಿ. ಗರಡಿ ಮನೆಗಳೆಂಬ ಸಾಂಪ್ರದಾಯಿಕ ಜಿಮ್‌ಗಳು ಕುಸ್ತಿಪಟುಗಳಿಗೆ ಮಾತ್ರ ಸೀಮಿತವಾಗಿತ್ತು.



ನಮ್ಮ ಇಂದಿನ ಜೀವನಶೈಲಿಯೇ ನಮ್ಮನ್ನು ರೋಗಗಳ ಕೂಪಕ್ಕೆ ತಳ್ಳುತ್ತಿದೆ, ನಮ್ಮ ಸಂತೋಷಗಳನ್ನೆಲ್ಲ ಕಸಿದುಕೊಳ್ಳುತ್ತಿದೆ, ನಮ್ಮನ್ನು ಇನ್ನಷ್ಟು ಅನಾರೋಗ್ಯಕ್ಕೀಡುಮಾಡುತ್ತಿದೆ ಎನಿಸಬಿಡುತ್ತದೆ. ಅಂದಿನ ಮಹಿಳೆಯರ ದಿನ ಬೆಳಗಾಗುತ್ತಿದ್ದುದೇ ಮನೆಯನ್ನೆಲ್ಲ ಒಪ್ಪವಾಗಿ ಗುಡಿಸಿ, ಬೆನ್ನು ಬಾಗಿಸಿ ನೆಲ ಒರೆಸಿ, ಮನೆಯಂಗಳದಲ್ಲೊಂದು ಪುಟ್ಟ ಚಿತ್ತಾರದ ರಂಗೋಲಿ ಹಾಕುವ ಮೂಲಕ. ಗಂಡಸರಿಗಾದರೂ ಅಷ್ಟೇ. ಬೆಳ್ಳಂಬೆಳಗ್ಗೆ ಎದ್ದು ಕೊಟ್ಟಿಗೆಗೆ ಹೋಗಿ ಹಸುಗಳ ಸೆಗಣಿ ಬಾಚಿ, ಅವಕ್ಕೊಂದಿಷ್ಟು ಹುಲ್ಲು ಮೇವು ಹಾಕಿ ಬರುವಷ್ಟರಲ್ಲಿ, ಎಂಥ ಚಳಿಗಾಲವಿದ್ದರೂ ಮೈ ಬೆವರತೊಡಗಿರುತ್ತದೆ!

ಅಲ್ಲಿಂದ ಮುಂದೆ ಪ್ರತೀ ಚಟುವಟಿಕೆಯೂ ದೇಹಕ್ಕೆ ಸಹಜವಾಗಿಯೇ ವ್ಯಾಯಾಮ ನೀಡುವಂತವು. ಮಧ್ಯಾಹ್ನದ ಅಡುಗೆಗೆ ಒರಳುಕಲ್ಲಿನಲ್ಲಿ ರುಬ್ಬಿದ ಮಸಾಲೆ. ಅಗತ್ಯವಿರುವ ನೀರನ್ನು ಬಾವಿಯಿಂದ ಹಗ್ಗವೆಳೆದು ತುಂಬಿಸಿಕೊಳ್ಳಬೇಕಿತ್ತಲ್ಲ, ಅದೆಂತಹ ವ್ಯಾಯಾಮ ಅಂತೀರಿ?! ಇನ್ನು, ಮೊಸರು ಕಡೆದು ಬೆಣ್ಣೆ ತೆಗೆಯುವ ಕೆಲಸವಿದೆಯಲ್ಲ, ಸೊಂಟದಿಂದ ಪ್ರಾರಂಭಿಸಿ, ಬೆನ್ನು, ಭುಜ, ಕೈಗಂಟು ಹೀಗೆ ಎಲ್ಲಾ ಅಂಗಾಗಗಳೂ ಅರಿವಿಲ್ಲದೆಯೇ ವ್ಯಾಯಾಮಕ್ಕೊಳಗಾಗಿಬಿಡುತ್ತಿದ್ದವು. ಬೆಳಿಗ್ಗೆಗೊಂದಿಷ್ಟು ತಿಂಡಿ ಹೊಟ್ಟೆಗಿಳಿಸಿ ತೋಟ/ಹೊಲದ ಕಡೆ ಕೃಷಿ ಚಟುವಟಿಕೆಗೆ ಹೊರಟುಬಿಟ್ಟರೆ ಎರಡೇ ಗಂಟೆಯಲ್ಲಿ ಹೊಟ್ಟೆ ಸೇರಿದ ಆಹಾರ ಕರಗಿರುತ್ತಿತ್ತು.

ತಿನ್ನುವ ಅನ್ನ ಸಮಯದೊಳಗೆ ಜೀರ್ಣವಾಗಿ ಬಿಟ್ಟಿತೆಂದರೆ ಅರ್ಧದಷ್ಟು ಅನಾರೋಗ್ಯ ದೂರವೇ ಉಳಿದುಬಿಡುತ್ತಿತ್ತು.

ಅಜೀರ್ಣದ ಮಾತಿಲ್ಲ, ಅದರಿಂದ ಉಂಟಾಗುವ ಹತ್ತಾರು ಸಮಸ್ಯೆಗಳ ಸುಳಿಯಿಲ್ಲ. ದೇಹ ದಣಿಯುವುದರಿಂದ ನಿದ್ರಾಹೀನತೆಯ ಚಿಂತೆಯಿಲ್ಲ. ಇಡೀ ತಾಲೂಕು ಕೇಂದ್ರಕ್ಕೆ ಇರುತ್ತಿದ್ದುದೇ ಒಂದೆರಡು ಆಸ್ಪತ್ರೆಗಳು, ಬೆರಳೆಣಿಕೆಯ ಪೇಶೆಂಟ್‌ಗಳು! ಮತ್ತೆ, ಕಾಲಕಾಲಕ್ಕೆ ನಿಯಮಿತವಾಗಿ ಅನುಸರಿಸುತ್ತಿದ್ದ ಪಥ್ಯ, ಉಪವಾಸ, ಕಾಲಕ್ಕನುಗುಣವಾದ ಆಹಾರ ಸೇವನೆಯೂ ಅನೇಕ ಖಾಯಿಲೆಗಳನ್ನು ದೂರವಿಡಲು ಸಹಕಾರಿಯಾಗಿರುತ್ತಿದ್ದವು.

ಇಂದು, ಪರಿಸ್ಥಿತಿ ಬಹಳೇ ಬದಲಾಗಿಬಿಟ್ಟಿದೆ. ತಿಂದ ಆಹಾರವನ್ನು ಯಾವಾಗಲೋ ಕರಗಿಸಬೇಕಾದ ಅನಿವಾರ್ಯ. ದೈಹಿಕ ಶ್ರಮವೇ ಇಲ್ಲದ ಕೆಲಸಗಳಿಂದ ನಿದ್ರೆ ಸುಳಿಯಲೂ ಗುದ್ದಾಡಬೇಕು. ಬೆಳಿಗ್ಗೆ ಸೂರ್ಯ ತಡವಾಗಿಯೇ ಉದಿಸುತ್ತಾನೆ. ಆಗೀಗ ಕಾಣುವ ಸುಂದರ ಸೂರ್ಯೋದಯವೂ ಆಹಾ ಎನಿಸಿಬಿಡುತ್ತದೆ! ಆಹಾರದಲ್ಲಿ ಔಷಧಿಯಿಲ್ಲದೆ, ಔಷಧಿಯೇ ಹೊಟ್ಟೆ ತುಂಬಿಸುವಷ್ಟಾಗಿದೆ. ಯಾರ್ಯಾರೋ ಹೇಳುವ ಮಾತುಗಳೇ ಸತ್ಯವೆನಿಸಿ, ಕೆಲ ಅರ್ಥವಿಲ್ಲದ ಆಹಾರ ಪದ್ಧತಿ, ಹೇಳಿಕೆಗಳು, 'ಹೀಗೆ ಮಾಡಿದ್ರೆ ಬೇಗ ಸ್ವರ್ಗ ಸೇರ್ತೀರಿ ಕಣ್ರೀ' ಎಂಬ ಮಾತುಗಳೇ ವೇದ್ಯವಾಗಿ ಇನ್ನಷ್ಟು ಅನಾರೋಗ್ಯದ ಕೂಪಕ್ಕೆ ಬೀಳುತ್ತಿದ್ದೇವೆ.

ಇದಕ್ಕೊಂದು ಉದಾಹರಣೆಯೆಂದರೆ, ತೆಂಗಿನ ಎಣ್ಣೆ ಬಳಸಿದರೆ ಕೊಬ್ಬು ಹೆಚ್ಚಾಗಿ ಬೊಜ್ಜು ಬೆಳೆಯುತ್ತದೆ, ತನ್ಮೂಲಕ ಹೃದಯ ಸಂಬಂಧಿ ಕಾಯಿಲೆಗಳಿಗೆ ತುತ್ತಾಗುತ್ತೀರಿ, ಬದಲಾಗಿ ಸೋಯಾ, ಸೂರ್ಯಕಾಂತಿ ಎಣ್ಣೆ ಇತ್ಯಾದಿಗಳನ್ನು ಬಳಸಿ ಎಂಬ ವಿದೇಶದವರ ಮಾತುಗಳು. ಅಸಲಿಗೆ, ಇದು ಸತ್ಯವೆಂದು ಒಪ್ಪಿಕೊಳ್ಳಲು ಯಾವುದೇ ಪುರಾವೆಗಳಿದ್ದಂತಿಲ್ಲ. ಹಿಂದೆಲ್ಲ ಎಲ್ಲಿದ್ದವು ಈ ಎಲ್ಲ ಖಾದ್ಯ ತೈಲಗಳು? ಆಗೇನಿದ್ದರೂ ಮನೆಯಲ್ಲೇ ಕೊಬ್ಬರಿ ಒಡೆದು, ನಿಯಮಿತ ಬಿಸಿಲಿಗೆ ಒಣಗಿಸಿ, ಸ್ಥಳೀಯ ಗಾಣದಿಂದಲೇ ತಯಾರಿಸಿದ ಶುದ್ಧ ಕೊಬ್ಬರಿ ಎಣ್ಣೆಯೇ ಹೊಟ್ಟೆ ಸೇರುತ್ತಿದ್ದಿದ್ದು. ಆಗ ಬೊಜ್ಜು ಅಪರೂಪವಾಗಿತ್ತು, ಹೃದಯ ಸಂಬಂಧಿ ಖಾಯಿಲೆಗಳು 70ರ ವಯಸ್ಸಿನಲ್ಲೂ ಸೋಕುತ್ತಿರಲಿಲ್ಲ.

ಅಂದೆಲ್ಲ ಮಲೆನಾಡು, ಕರಾವಳಿಗಳಲ್ಲಿ ಒಗ್ಗರಣೆ ಬಿಡಿ, ಕುರುಕಲು ಕರಿಯಲೂ ಅದೇ ಕೊಬ್ಬರಿ ಎಣ್ಣೆ. ಈಗ ಕೊಬ್ಬರಿ ಎಣ್ಣೆ ಬಳಸಿದರೆ ಇಲ್ಲದ ಖಾಯಿಲೆಗಳು ವಕ್ಕರಿಸುತ್ತವೆ! ಹೀಗೆ ನಮ್ಮಷ್ಟಕ್ಕೇ ನಾವು ಬದಲಾಗಿ, ಈಗ ಕಾಲವೇ ಸರಿಯಿಲ್ಲ ಎಂಬುದು ಅಭ್ಯಾಸವಾಗಿಬಿಟ್ಟಿದೆ. ನಿಯಮಿತ ಆಹಾರದೊಂದಿಗೆ ಮೈ ದಣಿಯುವಂತೆ ದುಡಿದು, ಆರೋಗ್ಯವನ್ನು ಕಾಪಾಡಿಕೊಳ್ಳುವುದು ಕೂಡ ಹಣ ಸಾಂಪಾದನೆಗಿಂತ ಹೆಚ್ಚು ಅಗತ್ಯ ಅನ್ನಿಸುವುದು ಸತ್ಯವೇ.

**– ಅಲೆಮಾರಿ.**

## ಹಮಾಸ್ ರಾಕೆಟ್ ದಾಳಿ: 22 ಮಂದಿ ಸಾವು



■ ವಿಜಯಸಾಕ್ಷಿ ಸುದ್ದಿ,ನವದೆಹಲಿ

ಶನಿವಾರ ಹಮಾಸ್ ಉಗ್ರಗಾಮಿಗಳೊಂದಿಗೆ ನಡೆದ ರಾಕೆಟ್ ಯುದ್ಧದಲ್ಲಿ ಇಸ್ರೇಲ್‌ನಲ್ಲಿ 22 ಮಂದಿ ಗುಂಡಿನ ದಾಳಿಗೆ ಬಲಿಯಾಗಿದ್ದಾರೆ ಎಂದು ಮೆಗೆನ್ ಡೇವಿಡ್ ಅಡೋಮ್ ತುರ್ತು ವೈದ್ಯಕೀಯ ಸೇವೆಗಳಿಂದ ತಿಳಿದುಬಂದಿದೆ.

ಅಂತಾರಾಷ್ಟ್ರೀಯ ಕಾಲಮಾನ ಇಂದು ಮಧ್ಯಾಹ್ನ ಗಂಟೆಯ ಸುಮಾರಿಗೆ ಮ್ಯಾಗೆನ್ ಡೇವಿಡ್ ಆಡಮ್ ತಂಡಗಳು 22 ಮಂದಿ ಮೃತಪಟ್ಟಿದ್ದಾರೆ ಎಂದು ಘೋಷಿಸಿದ್ದಾರೆ. ಹಲವರು ಗಾಯಗೊಂಡಿದ್ದಾರೆ. ದಾಳಿಯಲ್ಲಿ ಶಾರ್ ಹನೆಗೆವ್ ಪ್ರಾದೇಶಿಕ ಮಂಡಳಿಯ ಮುಖ್ಯಸ್ಥ ಓಫಿರ್ ಲೀಬ್‌ಸ್ಟೈನ್ ಮೃತಪಟ್ಟಿದ್ದಾರೆ ಎಂದು ಸ್ಥಳೀಯ ಮೂಲಗಳನ್ನು ಉಲ್ಲೇಖಿಸಿ ಟೈಮ್ಸ್ ಆಫ್ ಇಸ್ರೇಲ್ ವರದಿ ಮಾಡಿದೆ.

ಭಯೋತ್ಪಾದಕರ ದಾಳಿಯ ಸಂದರ್ಭದಲ್ಲಿ ಪಟ್ಟಣವನ್ನು ರಕ್ಷಿಸಲು ಹೋದಾಗ ಓಫೀರ್ ಕೊಲ್ಲಲ್ಪಟ್ಟರು ಎಂದು ಕೌನ್ಸಿಲ್‌ನ ಹೇಳಿಕೆ ಉಲ್ಲೇಖಿಸಿ ವರದಿ ಹೇಳಿದೆ. ಕೌನ್ಸಿಲ್‌ನ ಉಪ ಮುಖ್ಯಸ್ಥ ಯೋಸ್ಸಿ ಕೆರೆನ್ ಅವರು ಲೀಬ್‌ಸ್ಟೈನ್ ಸಾವಿನ ನಂತರ ದೇಹದ ಮಧ್ಯಂತರ ಉಸ್ತುವಾರಿ ವಹಿಸಿಕೊಂಡಿದ್ದಾರೆ ಎಂದು ಟೈಮ್ಸ್ ಆಫ್ ಇಸ್ರೇಲ್ ವರದಿ ಮಾಡಿದೆ.

ಇಸ್ರೇಲ್‌ನ ಅಶ್ಕೆಲೋನ್‌ನಲ್ಲಿರುವ ಗಾಜಾ ಪಟ್ಟಿಯಿಂದ ರಾಕೆಟ್‌ಗಳನ್ನು ಉಡಾವಣೆ ಮಾಡಿದ ನಂತರ ಬೆಂಕಿ ಉರಿಯುತ್ತಿರುವಾಗ ಒಬ್ಬ ವ್ಯಕ್ತಿ ರಸ್ತೆಯ ಮೇಲೆ ಓಡುತ್ತಿದ್ದಾನೆ.

ಸ್ಥಳೀಯ ಮಾಧ್ಯಮ ವರದಿಗಳು ಬೆಳಿಗ್ಗೆಯಿಂದ ಸುಮಾರು 200 ಇಸ್ರೇಲಿಗಳು ಗಾಯಗೊಂಡಿದ್ದಾರೆ ಮತ್ತು ಹಲವಾರು ಮಂದಿ ಮೃತಪಟ್ಟಿದ್ದಾರೆ ಎಂದು ವರದಿ ಮಾಡಿವೆ, ಇಸ್ರೇಲ್ ಪೊಲೀಸರ ಅಂದಾಜಿನ ಪ್ರಕಾರ ಸುಮಾರು 60 ನುಸುಳುಕೋರರು 14 ವಿವಿಧ ಸ್ಥಳಗಳಲ್ಲಿ ನೆಲೆಸಿದ್ದಾರೆ.

## ನವೆಂಬರ್‌ನಲ್ಲಿ ಜಾತಿ ಗಣತಿ ವರದಿ ಸಲ್ಲಿಕೆ: ಸಿಎಂ ಸಿದ್ದರಾಮಯ್ಯ

■ ವಿಜಯಸಾಕ್ಷಿ ಸುದ್ದಿ, ಮೈಸೂರು

ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿರುವ ಕೆ. ಜಯಪ್ರಕಾಶ್ ಹೆಗ್ಡೆ ಅವರು ನವೆಂಬರ್‌ನಲ್ಲಿ ವರದಿ ಸಲ್ಲಿಸುವುದಾಗಿ ಹೇಳಿದ್ದಾರೆ. ಅದು ಸಲ್ಲಿಕೆಯಾದ ಬಳಿಕ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದ್ದಾರೆ.

ಮೈಸೂರಿನಲ್ಲಿ ಮಾತನಾಡಿದ ಅವರು, ನಮ್ಮದು ಜಾತಿ ವ್ಯವಸ್ಥೆ ಆಧಾರಿತ ಸಮಾಜ. ಎಲ್ಲರಿಗೂ ಸಾಮಾಜಿಕ, ಆರ್ಥಿಕ, ರಾಜಕೀಯ ಸಮಾನತೆ ಕೊಡಬೇಕು. ಅದಕ್ಕೆ ಜಾತಿವಾರು ಅಂಕಿ ಅಂಶಗಳು ಬೇಕು. ಅದಕ್ಕಾಗಿ ನಾವು ಜಾತಿಗಣತಿ



ಮಾಡಿಸಿದ್ದೆವು. ಜಾತಿ ಗಣತಿ ಆದಾಗ ಕಾಂತರಾಜ್ ಹಿಂದುಳಿದ ವರ್ಗದ ಆಯೋಗದ ಅಧ್ಯಕ್ಷರಾಗಿದ್ದರು.

ಕಾಂತರಾಜ್ ವರದಿಯನ್ನು ಆಗ ಮುಖ್ಯಮಂತ್ರಿ ಆಗಿದ್ದ ಎಚ್.ಡಿ. ಕುಮಾರಸ್ವಾಮಿ ಅವರು ತೆಗೆದುಕೊಳ್ಳಲಿಲ್ಲ. ಈಗಿನ ಅಧ್ಯಕ್ಷರೊಂದಿಗೆ ಮಾತನಾಡಿದ್ದೇನೆ. ನವೆಂಬರ್‌ನಲ್ಲಿ ವರದಿ ಕೊಡುತ್ತೇನೆ ಅಂತ ಹೇಳಿದ್ದಾರೆ ಎಂದು ಸಿದ್ದರಾಮಯ್ಯ ತಿಳಿಸಿದರು. ವರದಿ ಸರ್ಕಾರದ ಕೈಸೇರಿದ ಮೇಲೆ ತೀರ್ಮಾನ ಮಾಡುತ್ತೇವೆ ಎಂದರು.

ಸರ್ಕಾರದ ಯೋಜನೆಗಳನ್ನು ಎಲ್ಲ ವರ್ಗಗಳ ಜನರಿಗೆ ತಲುಪಿಸಲು ಜಾತಿ ಮತ್ತು ಸಾಮಾಜಿಕ ಗಣತಿ, ಅದರ ಅಂಕಿ ಅಂಶಗಳು ಅಗತ್ಯ. ಸಬ್ ಕ ಸಾಥ್ ಸಬ್‌ಕ ವಿಕಾಸ್ ಎನ್ನುವ ಪ್ರಧಾನಿ ಜಾತಿಗಣತಿಯನ್ನು ವಿರೋಧಿಸುವುದು ಏಕೆ ಎಂದು ಅವರು ಪ್ರಶ್ನಿಸಿದರು.

## ಕ್ರೀಡಾಕೂಟದಲ್ಲಿ ರಾಜ್ಯ ಮಟ್ಟಕ್ಕೆ ಆಯ್ಕೆ

■ ವಿಜಯಸಾಕ್ಷಿ ಸುದ್ದಿ, ಗದಗ

ಪದವಿಪೂರ್ವ ಶಿಕ್ಷಣ ಇಲಾಖೆ ಗದಗ ಹಾಗೂ ಬಿಪಿನ್ ಚಿಕ್ಕಟ್ಟಿ ಪದವಿಪೂರ್ವ ಮಹಾವಿದ್ಯಾಲಯ ಗದಗ ಇವರ ಸಂಯುಕ್ತ ಆಶ್ರಯದಲ್ಲಿ ನಡೆದ 2023–24ನೇ ಸಾಲಿನ ಪದವಿಪೂರ್ವ ಕಾಲೇಜುಗಳ ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ಹುಲಕೋಟಿಯ ಜಿಸಿಟಿಎಂ ಸ್ವತಂತ್ರ ಪ.ಪೂ ಮಹಾವಿದ್ಯಾಲಯದ ವಿದ್ಯಾರ್ಥಿನಿಯರು ಸಾಧನೆ ಮಾಡಿದ್ದಾರೆ.

ಶಶಿಕಲಾ ಗಂಜಲಿ ಅಡೆತಡೆ ಓಟದಲ್ಲಿ ಹಾಗೂ ಯಲ್ಲವ್ವ ಇಂಗಳಳ್ಳಿ ಯೋಗಾಸನ ಸ್ಪರ್ಧೆಯಲ್ಲಿ ಜಿಲ್ಲಾಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಈ ವಿದ್ಯಾರ್ಥಿನಿಯರಿಗೆ ಮಹಾವಿದ್ಯಾಲಯದ ಆಡಳಿತ ಮಂಡಳಿ, ಶೈಕ್ಷಣಿಕ ಸಲಹಾ ಸಮಿತಿಯ ಚೇರಮನ್ ಡಿ.ಬಿ ಓದುಗೌಡರ, ಸದಸ್ಯರಾದ ಸಿ.ಬಿ ಕರಿಕಟ್ಟಿ ಹಾಗೂ ಎಂ.ಡಿ ದುರಗಣ್ಣವರ ಮತ್ತು ಮಹಾವಿದ್ಯಾಲಯದ ಪ್ರಾಚಾರ್ಯರು, ಸಿಬ್ಬಂದಿವರ್ಗ ಅಭಿನಂದನೆಯನ್ನು ಸಲ್ಲಿಸಿದ್ದಾರೆ.

## ಆ್ಯಸಿಡ್ ನೀಡಿ ಶಾಲೆಯ ಶೌಚಾಲಯ ಕ್ಲೀನ್ ಮಾಡಿಸಿದ ಶಿಕ್ಷಕರು; ಆಸ್ಪತ್ರೆ ಸೇರಿದ ವಿದ್ಯಾರ್ಥಿನಿ

■ ವಿಜಯಸಾಕ್ಷಿ ಸುದ್ದಿ, ರಾಮನಗರ

ಆ್ಯಸಿಡ್‌ನಿಂದ ಶಾಲೆಯ ಶೌಚಾಲಯವನ್ನು ಸ್ವಚ್ಛಗೊಳಿಸಲು ಮುಂದಾದ ವಿದ್ಯಾರ್ಥಿನಿಯೊಬ್ಬಳು ಶನಿವಾರ ಆಸ್ಪತ್ರೆಗೆ ದಾಖಲಾಗಿರುವ ಘಟನೆ ರಾಮನಗರ ಜಿಲ್ಲೆಯಲ್ಲಿ ನಡೆದಿದೆ.

ಸಂತ್ರಸ್ತೆಯನ್ನು ಮಾಗಡಿ ತಾಲೂಕಿನ ತೂಬಿನಗೆರೆ ಗ್ರಾಮದ ಪ್ರಾಥಮಿಕ ಶಾಲೆಯ ವಿದ್ಯಾರ್ಥಿನಿ ಒಂಬತ್ತು ವರ್ಷದ ಹೇಮಲತಾ ಎನ್ನಲಾಗಿದೆ. ವಿದ್ಯಾರ್ಥಿನಿಯ ಪೋಷಕರು ತಮ್ಮ ಮಗಳಿಗೆ ಶೌಚಾಲಯವನ್ನು ಸ್ವಚ್ಛಗೊಳಿಸುವಂತೆ ಮಾಡಿದ ಮುಖ್ಯೋಪಾಧ್ಯಾಯರು ಹಾಗೂ ಶಿಕ್ಷಕರ ವಿರುದ್ಧ ಶಿಕ್ಷಣ ಇಲಾಖೆ ಕ್ರಮಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ. ಮುಖ್ಯಶಿಕ್ಷಕ ಸಿದ್ದಲಿಂಗಯ್ಯ ಮತ್ತು ಶಿಕ್ಷಕ ಬಸವರಾಜು ಸಂತ್ರಸ್ತೆಗೆ ಆ್ಯಸಿಡ್ ಮತ್ತು ಬ್ಲೀಚಿಂಗ್ ಪೌಡರ್ ನೀಡಿ ಶಾಲೆಯ ಶೌಚಾಲಯವನ್ನು ತೊಳೆಯುವಂತೆ ಹೇಳಿದ್ದರು ಎನ್ನಲಾಗಿದೆ. ಮನೆಗೆ ಹಿಂದಿರುಗಿದ ನಂತರ, ವಿದ್ಯಾರ್ಥಿನಿ ಆರೋಗ್ಯದಲ್ಲಿ ಏರುಪೇರು ಉಂಟಾಗಿದೆ. ನಂತರ ಪೋಷಕರು ಆಕೆಯನ್ನು ಮಾಗಡಿ ಪಟ್ಟಣದ ತಾಲೂಕು ಆಸ್ಪತ್ರೆಗೆ ಕರೆದೊಯ್ದಿದ್ದಾರೆ.

ವೈದ್ಯರು ವಿಚಾರಿಸಿದಾಗ, ಶಾಲೆಯ ಶೌಚಾಲಯ ಸ್ವಚ್ಛಗೊಳಿಸುವಂತೆ ಶಿಕ್ಷಕರು ಒತ್ತಾಯಿಸಿದ ಬಗ್ಗೆ ಬಾಲಕಿ ತನ್ನ ಪೋಷಕರಿಗೆ ತಿಳಿಸಿದ್ದಾಳೆ.

ವೈದ್ಯರ ಪ್ರಕಾರ, ಶೌಚಾಲಯವನ್ನು ಸ್ವಚ್ಛಗೊಳಿಸುವಾಗ ಆ್ಯಸಿಡ್ ಸ್ಪರ್ಶದಿಂದ ಬಾಲಕಿ ಅಸ್ವಸ್ಥಗೊಂಡಿದ್ದಾಳೆ ಎಂದು ತಿಳಿಸಿದ್ದಾರೆ. ತಪ್ಪಿತಸ್ಥರನ್ನು ಅಮಾನತು ಮಾಡುವಂತೆ ಪೋಷಕರು ಒತ್ತಾಯಿಸಿದ್ದಾರೆ.

## ಕರ್ನಾಟಕ ರೈಲ್ವೆ ಮೂಲಸೌಕರ್ಯ ಅಭಿವೃದ್ಧಿ ನಿಗಮಕ್ಕೆ ಎಂಡಿ ನೇಮಕ ಪ್ರಕ್ರಿಯೆ ವಿಳಂಬ; ತೇಜಸ್ವಿ ಸೂರ್ಯ ಕಿಡಿ

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಬೆಂಗಳೂರಿನ ಟ್ರಾಫಿಕ್ ಸಮಸ್ಯೆಗಳ ನಡುವೆ, ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಶನಿವಾರ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರವು ಕರ್ನಾಟಕ ರೈಲ್ವೆ ಮೂಲಸೌಕರ್ಯ ಅಭಿವೃದ್ಧಿ ನಿಗಮಕ್ಕೆ (K-RIDE) ಪೂರ್ಣಾವಧಿಯ ವ್ಯವಸ್ಥಾಪಕ ನಿರ್ದೇಶಕರ (ಎಂಡಿ) ನೇಮಕ ಪ್ರಕ್ರಿಯೆಯನ್ನು ವಿಳಂಬಗೊಳಿಸುತ್ತಿದೆ ಎಂದು ಟೀಕಿಸಿದರು.

'ಬೆಂಗಳೂರಿನ ಸಂಚಾರ ದಟ್ಟಣೆ ಸಮಸ್ಯೆಯನ್ನು ಪರಿಹರಿಸುವ ಗಂಭೀರತೆ ಮತ್ತು ಉದ್ದೇಶದ ಕೊರತೆಯು ಎದ್ದು ಕಾಣಿಸುತ್ತಿದೆ. ಕಾಂಗ್ರೆಸ್ ನೇತೃತ್ವದ ಕರ್ನಾಟಕ ಸರ್ಕಾರವು ಕೆ–ರೈಡ್‌ನಲ್ಲಿ ಪೂರ್ಣ ಸಮಯದ ಎಂಡಿ ನೇಮಕ ಪ್ರಕ್ರಿಯೆಯನ್ನು ವೇಗಗೊಳಿಸಲು ವಿಫಲವಾಗಿದೆ' ಎಂದು ತೇಜಸ್ವಿ ಸೂರ್ಯ ಟ್ವೀಟ್ ಮಾಡಿದ್ದಾರೆ.



'ಬೆಂಗಳೂರು ಉಪನಗರ ರೈಲು ಯೋಜನೆಗೆ ಸಂಬಂಧಿಸಿದ ಕೆ–ರೈಡ್ ಪೂರ್ಣಾವಧಿಯ ಎಂಡಿಯನ್ನು ಹೊಂದಿಲ್ಲ. ನೇಮಕ ಮಾಡಲು ಅಧಿಸೂಚನೆಯನ್ನು ಬಿಡುಗಡೆ ಮಾಡಿದ್ದರೂ, ರೈಲ್ವೆ ಸಚಿವರ ಮಧ್ಯಸ್ಥಿಕೆಯಲ್ಲಿ ಮೂಲಭೂತ ಅರ್ಹತಾ ಮಾನದಂಡಗಳನ್ನು ಅನುಸರಿಸಲು ವಿಫಲವಾಗಿದೆ ಎಂಬುದು ಬಹಿರಂಗವಾಯಿತು'. ಸರ್ಕಾರವು ಇದನ್ನು ಆದ್ಯತೆಯನ್ನಾಗಿ ಪರಿಗಣಿಸಬೇಕು ಮತ್ತು ರೈಲ್ವೆ ಮಂಡಳಿಯು ಹೊರಡಿಸಿದ ಮಾರ್ಗಸೂಚಿಗಳಿಗೆ ಅನುಗುಣವಾಗಿ ಮರು–ಜಾಹೀರಾತು ನೀಡಬೇಕು ಎಂದು ಹೇಳಿದ್ದಾರೆ.ಇದು ಬೆಂಗಳೂರು ಅರ್ಬನ್ ಮೊಬಿಲಿಟಿಯನ್ನು ಸುಧಾರಿಸುವ ಬದ್ಧತೆಯ ಗಂಭೀರ ಕೊರತೆಯನ್ನು ತೋರಿಸುತ್ತದೆ'. ಬೆಂಗಳೂರು ಉಪನಗರ ರೈಲು ಯೋಜನೆ ನಿರ್ಣಾಯಕವಾಗಿದೆ ಮತ್ತು ನಗರದಲ್ಲಿ ಸಂಚಾರದ ಸವಾಲುಗಳನ್ನು ಸರಾಗಗೊಳಿಸಬಹುದು ಮತ್ತು ಸೂಕ್ತವಾದ ಪೂರ್ಣ ಸಮಯದ ಅಧಿಕಾರಿಯೊಂದಿಗೆ ಮಾತ್ರ ಇದನ್ನು ಮಾಡಬಹುದು ಎಂದು ಅವರು ತಿಳಿಸಿದ್ದಾರೆ.

## ಮಾಗಡಿಯ ಐತಿಹಾಸಿಕ ಕೆಂಪೇಗೌಡರ ಕೋಟೆ ರಕ್ಷಣೆಗೆ ಸರ್ಕಾರ ಬದ್ಧ: ಡಿಸಿಎಂ ಡಿಕೆ ಶಿವಕುಮಾರ್

■ ವಿಜಯಸಾಕ್ಷಿ ಸುದ್ದಿ, ರಾಮನಗರ

ಐತಿಹಾಸಿಕ ಪುಣ್ಯಭೂಮಿ ಮಾಗಡಿಯನ್ನು ಪವಿತ್ರ ಸ್ಥಳವನ್ನಾಗಿ ಅಭಿವೃದ್ಧಿ ಪಡಿಸಲು ರಾಜ್ಯ ಸರ್ಕಾರ ಬದ್ಧವಿದೆ ಎಂದು ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ತಿಳಿಸಿದ್ದಾರೆ.



ಮಾಗಡಿಯ ಕೆಂಪಾಪುರ ಗ್ರಾಮದಲ್ಲಿರುವ ನಾಡಪ್ರಭು ಕೆಂಪೇಗೌಡರ ಸಮಾಧಿಗೆ ಗೌರವ ನಮನ ಅರ್ಪಿಸಿ ಮಾತನಾಡಿದ ಡಿಕೆ ಶಿವಕುಮಾರ್, ಬೆಂಗಳೂರು ನಿರ್ಮಾತೃ ಕೆಂಪೇಗೌಡ ಅವರು ಐದು ಶತಮಾನಗಳ ಹಿಂದೆ ಕಟ್ಟಿದ ಬೆಂಗಳೂರೆಂಬ ಕನಸಿನ ನಗರಿ ಇಂದು ಜಾಗತಿಕವಾಗಿ ಗುರುತಿಸಿಕೊಂಡಿರುವುದು ನಮ್ಮೆಲ್ಲರ ಹೆಮ್ಮೆ. ಮಾಗಡಿ ಮೂವರು ಮಹಾಪುರುಷರಿಗೆ ಜನ್ಮನೀಡಿರುವ ಪುಣ್ಯಭೂಮಿ. ಮಾಗಡಿಯಲ್ಲಿ ಕೆಂಪೇಗೌಡರು, ವೀರಾಪುರದಲ್ಲಿ ಸಿದ್ಧಗಂಗಾ ಶಿವಕುಮಾರ ಸ್ವಾಮಿಗಳು, ಬಾನಂದೂರು ಗ್ರಾಮದಲ್ಲಿ ಬಾಲಗಂಗಾಧರನಾಥ ಸ್ವಾಮೀಜಿಗಳು ಜನಿಸಿದ ಪವಿತ್ರ ಸ್ಥಳ ಮಾಗಡಿಯನ್ನು ಪವಿತ್ರ ಸ್ಥಳವನ್ನಾಗಿ ಅಭಿವೃದ್ಧಿ ಪಡಿಸಲಾಗುವುದು ಎಂದರು.

ಈ ಹಿಂದೆ ಕೆಂಪೇಗೌಡರ ಪ್ರಾಧಿಕಾರವನ್ನು ಅಭಿವೃದ್ಧಿ ಮಾಡುವ ಮೂಲಕ ಬದಲಾವಣೆ ತರುತ್ತೇವೆ. ಕೆಂಪೇಗೌಡರು ಈ ದೇಶದ ಆಸ್ತಿ. ಕೆಂಪೇಗೌಡರ ಐಕ್ಯ ಸ್ಥಳ, ಕೆಂಪೇಗೌಡರು ನಿರ್ಮಿಸಿದ ಕೋಟೆಯನ್ನು ಅಭಿವೃದ್ಧಿಪಡಿಸಲು ನಾವು ಸಿದ್ಧರಿದ್ದೇವೆ ಎಂದು ಅವರು ತಿಳಿಸಿದರು.

ಮಾಗಡಿಯ ಕೋಟಗೆ ಭೇಟಿ ನೀಡಿ ಪರಿಶೀಲಿಸಿದ ಅವರು, ಕೆಂಪೇಗೌಡರ ಪರಂಪರೆಯ ಕುರುಹುಗಳನ್ನು ಪ್ರವಾಸೋದ್ಯಮದ ಪ್ರಮುಖ ಆಕರ್ಷಣೆಯಾಗಿ ಮಾಡುವುದು ನಮ್ಮ ಗುರಿಯಾಗಿದ್ದು, ಕೋಟೆ ರಕ್ಷಣೆಯಿಂದ ಹಿಡಿದು ಅವರ ಆಳ್ವಿಕೆಯ ಪ್ರತಿ ಕುರುಹುಗಳನ್ನು ಐತಿಹಾಸಿಕ ಮಹತ್ವದೊಂದಿಗೆ ಸಂರಕ್ಷಿಸಲು ನಮ್ಮ ಸರ್ಕಾರ ಬದ್ಧವಿದೆ ಎಂದರು. ಶಾಸಕ ಹೆಚ್.ಸಿ. ಬಾಲಕೃಷ್ಣ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ನರೇಗಲ್ಲ ಬೀಚಿ ಬಳಗದ ಸಭೆಯಲ್ಲಿ ಸಂದೇಶ ದೊಡ್ಡಮೇಟಿ ಅಭಿಮತ

# ಬೀಚಿಯವರ ಸಂದೇಶಗಳು ಸರ್ವಕಾಲಿಕ




■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಹಾಸ್ಯಬ್ರಹ್ಮ ಬೀಚಿ ಕೇವಲ ಜನರನ್ನು ನಗಿಸಲು ಮಾತ್ರ ಮುಂದಾಗಲಿಲ್ಲ. ಕಹಿಯಾದ ಸಂದೇಶವನ್ನೂ ಸಹ ತಮ್ಮ ನಗೆ ಗುಳಿಗೆಗಳ ಮೂಲಕ ಸಿಹಿ ಮಾಡಿ ಜನತೆಗೆ ಉಣಬಡಿಸಿದರು. ಅವರ ಸಂದೇಶಗಳು ಸಾರ್ವಕಾಲಿಕ ಎಂದು ತಾ.ಪಂ ಮಾಜಿ ಸದಸ್ಯ ಸಂದೇಶ ದೊಡ್ಡಮೇಟಿ ಹೇಳಿದರು.

ಜಕ್ಕಲಿಯ ಅಂಗನವಾಡಿ ಕಟ್ಟಡದಲ್ಲಿ ಗುರುವಾರ ನಡೆದ ನರೇಗಲ್ಲ ಬೀಚಿ ಬಳಗದ ಸಭೆಯಲ್ಲಿ ಅವರು ಮಾತನಾಡಿದರು.

ಬೀಚಿಯವರು ಎಲ್ಲರಂತೆ ಸಾಮಾನ್ಯ ಮನುಷ್ಯರಾಗಿದ್ದರೂ ಕೂಡ ಅವರಲ್ಲಿ ದೈವದತ್ತವಾದ ಹಾಸ್ಯಪ್ರಜ್ಞೆ ಅಡಕವಾಗಿತ್ತು. ಇದರಿಂದ ಅವರು ಯಾವುದೇ ಸಂಗತಿಯನ್ನು ತಮ್ಮ ಹಾಸ್ಯದ ಮೂಲಕ ಹೇಳುವ ವಿಶಿಷ್ಠ ಗುಣವನ್ನು ಬೆಳೆಸಿಕೊಂಡಿದ್ದರು. ಆದ್ದರಿಂದಲೇ ಅವರು ಅಳಿದರೂ ತಮ್ಮ ಸಾಹಿತ್ಯದ ಮೂಲಕ ಕನ್ನಡ ನಾಡಿನಲ್ಲಿ ಚಿರಸ್ಥಾಯಿಯಾಗಿದ್ದಾರೆ ಎಂದರು. ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ಶಿವನಾಗಪ್ಪ ದೊಡ್ಡಮೇಟಿ ಮಾತನಾಡಿ,

ಪ್ರಕಾಶಪ್ಪ ಹೊಸಮನಿ ಮಾತನಾಡಿ, ನಮ್ಮ ಭಾಗದಲ್ಲಿ ಕಳೆದ 10 ವರ್ಷಗಳಿಂದ ಸಾಗಿ ಬರುತ್ತಿರುವ ಸಾಹಿತ್ತಿಕ ಸಂಘಟನೆಯೆಂದರೆ ಇದೊಂದೇ. ಇದನ್ನು ನಾವೆಲ್ಲರೂ ಬೆಂಬಲಿಸಿ ಸದಸ್ಯತ್ವ ಪಡೆದುಕೊಳ್ಳುತ್ತೇವೆ ಎಂದರು.

ಬೀಚಿಯವರನ್ನು ಓದುವದೆಂದರೆ ಜೀವನವನ್ನು ಅರಿತಂತೆ. ಅವರ ಕೃತಿಗಳು ಜೀವನದ ದರ್ಶನ ಮಾಡಿಸುತ್ತವೆ. ಅವರ ಹೆಸರಿನ ಬಳಗಕ್ಕೆ ನಾವೆಲ್ಲರೂ ಸದಸ್ಯರಾಗುತ್ತೇವೆ ಮತ್ತು ಸದಸ್ಯತ್ವವನ್ನು ಮಾಡಿಸುತ್ತೇವೆ ಎಂದರು.

ವೇದಿಕೆಯ ಮೇಲೆ ಶೇಖರಪ್ಪ ಆದಿ, ದೊಡ್ಡಾಟದ ಕಲಾವಿದ ಮುತ್ತಣ್ಣ ಅಸೂಟಿ ಉಪಸ್ಥಿತರಿದ್ದರು. ಬಳಗದ ಹಿಂದಿನ ಅಧ್ಯಕ್ಷ ಡಿ.ಎ ಅರವಟಗಿಮಠ, ಎಂ.ಎಸ್ ದಢೇಸೂರಮಠ ಪ್ರಾಸ್ತಾವಿಕವಾಗಿ ಮಾತನಾಡಿದರು.

ಸಭೆಯಲ್ಲಿ ಉಪಾಧ್ಯಕ್ಷ ಎಸ್. ಆರ್ ನರೇಗಲ್ಲ, ಕೋಶಾಧ್ಯಕ್ಷ ಶಿವಯೋಗಿ ಜಕ್ಕಲಿ, ಸಂಗಮೇಶ ಮೆಣಸಿಗಿ, ಬಸವರಾಜ ರಂಗಣ್ಣವರ, ಶರಣಪ್ಪ ಕುರಡಗಿ, ಬಸವರಾಜ ಹೊಸಮನಿ, ರುದ್ರಪ್ಪ ಬೂದಿಹಾಳ, ಹನುಮಪ್ಪ ರೋಣದ ಮುಂತಾದವರು ಉಪಸ್ಥಿತರಿದ್ದರು. ಬಿ.ಟಿ ತಾಳಿ, ಹನುಮಂತಪ್ಪ ಜಂಗಣ್ಣವರ ಮತ್ತು ಮುನಿಯಪ್ಪ ಪಲ್ಲೇದ ಅವರ ಹಾಡುಗಳು ಸಭೆಯ ಗಮನ ಸೆಳೆದವು. ಸಂಘಟನಾ ಕಾರ್ಯದರ್ಶಿ ಸಿ.ಕೆ ಕೇಸರಿ ಸ್ವಾಗತಿಸಿದರು. ಶಿಕ್ಷಕ ವಿ.ಬಿ ಕುಂಬಾರ ನಿರೂಪಿಸಿದರು. ಸಂಚಾಲಕ ಈಶ್ವರ ಬೆಟಗೇರಿ ವಂದಿಸಿದರು.

## 'ಉನ್ನತಿ–ಪ್ಲೇಸ್‌ಮೆಂಟ್ ಡ್ರೈವ್–2023'

■ ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ನೈಪುಣ್ಯ ಕೇಂದ್ರ–ಪ್ಲೇಸ್‌ಮೆಂಟ್ ಸೆಲ್ ಇವರ ಮುಂದಾಳತ್ವದಲ್ಲಿ 'ಉನ್ನತಿ–ಪ್ಲೇಸ್‌ಮೆಂಟ್ ಡ್ರೈವ್–2023'ನ್ನು 4ನೇ ಸೆಮಿಸ್ಟರ್‌ನ ಎಲ್ಲಾ ಸ್ನಾತಕೋತ್ತರ ಪದವೀಧರರಿಗೂ ಆಯೋಜಿಸಲಾಗಿತ್ತು.

ಸಮಾರಂಭವನ್ನುದ್ದೇಶಿಸಿ ಡಾ. ಶಶಿಕಾಂತ್ ಡಿ.ಎಚ್ ಮಾತನಾಡಿ, ಪ್ಲೇಸ್‌ಮೆಂಟ್ ಡ್ರೈವ್‌ನಲ್ಲಿ ಭಾಗವಹಿಸಲಿರುವ ಸಂಸ್ಥೆಗಳು, ಸಂದರ್ಶನದ ಸ್ವರೂಪ ಮುಂತಾದ ವಿಷಯಗಳ ಕುರಿತು ಮಾಹಿತಿ ಹಂಚಿಕೊಂಡರು.

ಕುಲಸಚಿವ ಪ್ರೊ. ಬಸವರಾಜ ಲಕ್ಕಣ್ಣವರ, ವಿದ್ಯಾರ್ಥಿಗಳಿಗೆ ಹುರಿದುಂಬಿಸಿ ಸಂದರ್ಶನಕ್ಕೆ ಪ್ರೇರೇಪಿಸಿ, ಕಂಪನಿಗಳು ಮಾಡಬೇಕಾದ ಕಾರ್ಯಗಳು ಮತ್ತು



ವಿದ್ಯಾರ್ಥಿಗಳು ನಿರ್ವಹಿಸಬೇಕಾದ ಶಿಸ್ತು–ವೈಖರಿಗಳ ಬಗ್ಗೆ ವಿವರಿಸಿ ಸಮಾರಂಭಕ್ಕೆ ಶುಭ ಕೋರಿದರು.

ದೇಶಪಾಂಡೆ ಸ್ಕಿಲಿಂಗ್, ಎಕ್ಸಿಸ್ ಬ್ಯಾಂಕ್, ವಿಕಾಸ್ ಬ್ಯಾಂಕ್, ಎಲಿನಾ, ಏರಿಯಲ್ ಜಿಯೋಮ್ಯಾಟಿಕ್ಸ್, ಅದ್ಯಪ್ರಗ್ನಯ, ನಿವಾ ಬೂಪಾ ಇನ್ಸೂರೆನ್ಸ್, ಬಿಗ್ ಬಾಸ್ಕೆಟ್, ಸೌಖ್ಯದ, ಮುತ್ತೂಟ್ ಫೈನಾನ್ಸ್ ಸೇರಿದಂತೆ ಒಟ್ಟು 20 ಕಂಪನಿಗಳು ಈ ಡ್ರೈವ್‌ನಲ್ಲಿ ಭಾಗವಹಿಸಿದ್ದವು.

ಸಂಜೆ ಸಮಾರೋಪ ಹಾಗೂ ಉದ್ಯೋಗ ಪತ್ರ ವಿತರಣಾ ಕಾರ್ಯಕ್ರಮ ನಡೆಯಿತು.

ಈ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಆದರ್ಶ ಶಿಕ್ಷಣ ಸಮಿತಿಯ ಆನಂದ ಪೋತ್ನಿಸ್, ಫ್ಯೂಚರ್ ಗ್ರೀನ್ ಬಾಗಲಕೋಟೆಯ ಡಾ. ಬಿ.ಆರ್ ಅಟಾನಿ ಪಾಲ್ಗೊಂಡಿದ್ದರು. ಸಮಾರಂಭದ ಅಧ್ಯಕ್ಷತೆಯನ್ನು ಕುಲಪತಿ ಪ್ರೊ. ವಿಷ್ಣುಕಾಂತ ಚಟಪಲ್ಲಿ ವಹಿಸಿದ್ದರು. ನೈಪುಣ್ಯ ಕೇಂದ್ರದ ತಂಡ, ವಿಶ್ವವಿದ್ಯಾಲಯದ ಅಧಿಕಾರಿಗಳು, ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಪ್ರಶಾಂತ ಮೇರವಾಡೆ ಕಾರ್ಯಕ್ರಮವನ್ನು ನಿರ್ವಹಿಸಿದರು.

# ಸ್ವಾಸ್ಥ್ಯ ಕುಟುಂಬ, ಉತ್ತಮ ಸಮಾಜ ನಿರ್ಮಾಣದ ಸಂಕಲ್ಪ

▸▸ ಮೊದಲನೇ ಪುಟದಿಂದ

ಡಾ. ಡಿ.ವೀರೇಂದ್ರ ಹೆಗ್ಗಡೆಯವರು 1992ರಲ್ಲಿ ದುಶ್ಚಟಮುಕ್ತ ಸಮಾಜ ನಿರ್ಮಾಣಕ್ಕಾಗಿ ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆಯನ್ನು ಬೆಳ್ತಂಗಡಿಯಲ್ಲಿ ಪ್ರಾರಂಭಿಸಿದರು. ಸಂಸ್ಥೆಯ ಮುಖ್ಯಉದ್ದೇಶ, ಮದ್ಯಪಾನ ಮತ್ತು ಮಾದಕವಸ್ತುಗಳ ವಿರುದ್ಧ ಜಾಗೃತಿ ಮೂಡಿಸಿ, ದುಶ್ಚಟಗಳ ದಾಸರಾದ ವ್ಯಕ್ತಿಗಳನ್ನು ಇದರಿಂದ ಮುಕ್ತಿಗೊಳಿಸಿ ಸ್ವಾಸ್ಥ್ಯ ಕುಟುಂಬ ಮತ್ತು ಸಮಾಜ ನಿರ್ಮಾಣ ಮಾಡುವ ಕಾರ್ಯವಾಗಿದೆ.

ಈ ನಿಟ್ಟಿನಲ್ಲಿ ಕಳೆದ 32 ವರ್ಷಗಳಿಂದ ಕರ್ನಾಟಕ ರಾಜ್ಯಾದ್ಯಂತ ಮದ್ಯವರ್ಜನ ಶಿಬಿರಗಳನ್ನು ಏರ್ಪಡಿಸುವುದರ ಮೂಲಕ ರಾಜ್ಯದಲ್ಲಿ 1750ಕ್ಕೂ ಹೆಚ್ಚು ಶಿಬಿರಗಳನ್ನು ಏರ್ಪಡಿಸಿ ಸುಮಾರು 1,35,000 ಮದ್ಯವ್ಯಸನಿಗಳು ಪಾನಮುಕ್ತರಾಗಿ ಸುಖಸಂಸಾರವನ್ನು ನಡೆಸುತ್ತಿದ್ದಾರೆ. ಅದೇ ರೀತಿ ಕರ್ನಾಟಕ ರಾಜ್ಯಾದ್ಯಂತ ಪ್ರತಿವರ್ಷ ಶಾಲಾ-ಕಾಲೇಜುಗಳಲ್ಲಿ ಸ್ವಾಸ್ಥಸಂಕಲ್ಪ ಕಾರ್ಯಕ್ರಮದ ಮೂಲಕ ದುಶ್ಚಟ ವಿರುದ್ಧ ಜಾಗೃತಿ ಮೂಡಿಸುವ ಕೆಲಸವನ್ನು ಮಾಡಲಾಗುತ್ತಿದೆ. ಇದುವರೆಗೂ 15,241 ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮವನ್ನು ಮಾಡಿ 12,60,295 ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸಲಾಗಿದೆ. ಜಿಲ್ಲೆಯಲ್ಲಿ ಜನಜಾಗೃತಿ ವೇದಿಕೆಯನ್ನು 2009ರಲ್ಲಿ ಪ್ರಾರಂಭಿಸಿದ್ದು, ಇದುವರೆಗೂ 39 ಮದ್ಯವರ್ಜನ ಶಿಬಿರಗಳನ್ನು ಏರ್ಪಡಿಸಿ 2847 ಮದ್ಯವ್ಯಸನಿಗಳನ್ನು ಮದ್ಯಮುಕ್ತರನ್ನಾಗಿ ಮಾಡಿಸಲಾಗಿದೆ ಮತ್ತು 270 ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮಗಳನ್ನು ಮಾಡಿ 24,030 ವಿದ್ಯಾರ್ಥಿಗಳಿಗೆ ಮಾಹಿತಿ ನೀಡಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಜನಜಾಗೃತಿ ವೇದಿಕೆಯ ನಿಕಟಪೂರ್ವ ಅಧ್ಯಕ್ಷ ಶಿವಪ್ರಕಾಶ ಮಹಾಜನಶೆಟ್ಟರ್, ನೂತನ ಅಧ್ಯಕ್ಷ ಶಿವಾನಂದ ಬೆಂತೂರು, ಉಪಾಧ್ಯಕ್ಷ ಚಂದ್ರಶೇಖರ ಹುಣಸಿಕಟ್ಟಿ, ಸದಸ್ಯರಾದ ಮಂಜುನಾಥ ಹದ್ದಣ್ಣವರ, ದೇವೇಂದ್ರಪ್ಪ ಕಾಗೆನವರ, ಕ್ಷೇತ್ರ ಯೋಜನಾಧಿಕಾರಿ ಸುರೇಂದ್ರ ನಾಯ್ಕ ಮುಂತಾದವರು ಉಪಸ್ಥಿತರಿದ್ದರು.

# ಗುಣಮಟ್ಟದ ಶಿಕ್ಷಣಕ್ಕೆ ಅದಾಲತ್ ಸಹಕಾರಿ



■ ವಿಜಯಸಾಕ್ಷಿ ಸುದ್ದಿ, ಮುಳಗುಂದ

ಪ್ರಾಥಮಿಕ ಹಂತದ ಮಕ್ಕಳ ಗುಣಮಟ್ಟದ ಶಿಕ್ಷಣ ಅಭಿವೃದ್ಧಿಗೆ ಅದಾಲತ್ ತುಂಬಾ ಸಹಕಾರಿಯಾಗುವುದು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ವಿ.ವಿ ನಡುವಿನಮನಿ ಹೇಳಿದರು.

ಅವರು ಪಟ್ಟಣದ ಸರಕಾರಿ ಮಾದರಿ ಕನ್ನಡ ಗಂಡು ಮಕ್ಕಳ ಶಾಲೆ ನಂ.1ರಲ್ಲಿ ಗದಗ ಗ್ರಾಮೀಣ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ವಲಯ ಹಾಗೂ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಗ್ರಾಮೀಣ ವಲಯ ಇವರ ಸಂಯುಕ್ತ ಆಶ್ರಯದಲ್ಲಿ 'ಶಿಕ್ಷಣ ಆದಾಲತ್' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಶಿಕ್ಷಕರ ಸಮಸ್ಯೆಗಳನ್ನು ನಿವಾರಿಸಿದಲ್ಲಿ, ಶಿಕ್ಷಕರು ಕಲಿಕಾ ಕೊಠಡಿಗಳಲ್ಲಿ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕೊಡಲು ಸಹಕಾರಿಯಾಗುತ್ತದೆ. ಸೇವಾ ಪುಸ್ತಕದಲ್ಲಿ ಶಿಕ್ಷಕರ ಎಲ್ಲಾ ದಾಖಲಾತಿಗಳನ್ನು ಸಂಗ್ರಹಿಸಿ ಇಡುವುದರಿಂದ ಶಿಕ್ಷಕರು ನಿಶ್ಚಿಂತೆಯಿಂದ ಕಾಯಕ ಮಾಡಲು ಸಹಕಾರವಾಗುತ್ತದೆ. ಶಿಕ್ಷಣಾಧಿಕಾರಿಗಳು, ಶಿಕ್ಷಕರ ಸಂಘಗಳು ಯಾವತ್ತು ಶಿಕ್ಷಕರ ಪರವಾಗಿ ಕೆಲಸ ಮಾಡುತ್ತೇವೆ ಎಂದರು.

ಶಾಲಾ ಪ್ರಧಾನ ಗುರು ಪಿ.ಬಿ ಕೆಂಚನಗೌಡರ, ವಿ.ಎಂ ಹಿರೇಮಠ, ಎಸ್.ಆರ್ ಬಂಡಿ, ಎನ್.ಎಸ್ ಪಾಟೀಲ್, ಎಂ.ಎಂ ಮೇಗಲಮನಿ, ಪಿ.ಬಿ ಮುದೋಳಮಠ, ಬಿ.ಬಿ ಹಡಪದ, ದತ್ತಾತ್ರೇಯ ದೀಕ್ಷಿತ, ರಾಜು ಬದಾಮಿ ಹಾಗೂ ಕ್ಲಸ್ಟರ್ ಶಿಕ್ಷಕ ವೃಂದದವರಿದ್ದರು.

# ಇಂದು ಬಸವ ಕೇಂದ್ರದಲ್ಲಿ ಮಾಸಿಕ ಶಿವಾನುಭವ

■ ವಿಜಯಸಾಕ್ಷಿ ಸುದ್ದಿ, ಗದಗ

ಬಸವ ಕೇಂದ್ರ ಹಾಗೂ ಜಾಗತಿಕ ಲಿಂಗಾಯತ ಮಹಾಸಭೆ ಸಂಯುಕ್ತ ಆಶ್ರಯದಲ್ಲಿ ಶಿವಾನುಭವ ಕಾರ್ಯಕ್ರಮವನ್ನು ದಿ.08-10-2023 ನೇ ರವಿವಾರ ಸಂಜೆ 6.30 ಗಂಟೆಗೆ ಒಕ್ಕಲಗೇರಿ ಓಣಿಯಲ್ಲಿರುವ ಶ್ರೀ ಚಿಲ್ಲಾಳೇಶ್ವರ ಶಾಲೆಯಲ್ಲಿ ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ಹಿರಿಯ ನಾಗರಿಕರ ದಿನಾಚರಣೆ ಅಂಗವಾಗಿ ಹಿರಿಯ ಶರಣರಾದ ಪ್ರೊ.ಕೆ.ಎಚ್. ಬೇಲೂರು, ಸಿದ್ಧಲಿಂಗಪ್ಪ ವೀರಪ್ಪ ನಾರಾಯಣಪೂರ ಗುರುಗಳು ಮತ್ತು ಶರಣೆ ಅನಸೂಯಮ್ಮ ಸಿದ್ಧಲಿಂಗಪ್ಪ ಮೇಲಗಿರಿ ಇವರುಗಳನ್ನು ಸನ್ಮಾನಿಸಲಾಗುವುದು. ಅಧ್ಯಕ್ಷತೆಯನ್ನು ಶರಣ ಸಿ.ಎ.ಕೆ.ಎಸ್.ಚೆಟ್ಟಿಯವರು ವಹಿಸುವರು.

ಕಾರಣ ಎಲ್ಲಾ ಸದಸ್ಯರು ಸಮಯಕ್ಕೆ ಸರಿಯಾಗಿ ಆಗಮಿಸಲು ಕಾರ್ಯದರ್ಶಿ ಶೇಕಣ್ಣ ಕವಳಿಕಾಯಿ ಹಾಗೂ ಕಿರಣ ತಿಪ್ಪಣ್ಣನವರ ವಿನಂತಿಸಿದ್ದಾರೆ.

'ಲಕ್ಷ್ಮೇಶ್ವರದ ಮಹಾರಾಜ' ಖ್ಯಾತಿಯ ಹಿಂದೂ ಮಹಾಗಣಪತಿ ಮೂರ್ತಿಯ ವಿಸರ್ಜನೆ

# ಶೋಭಾಯಾತ್ರೆಗೆ ಹರಿದು ಬಂದ ಜನಸಾಗರ





■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದಲ್ಲಿ ಸೆ.18ರಂದು ಸ್ಥಾಪನೆಗೊಂಡಿದ್ದ ಲಕ್ಷ್ಮೇಶ್ವರದ ಮಹಾರಾಜಾ ಎಂದೇ ಖ್ಯಾತವಾಗಿದ್ದ ಹಿಂದೂ ಮಹಾಗಣಪತಿ ಮೂರ್ತಿಯ ವಿಸರ್ಜನೆಗೆ ಜಿಲ್ಲೆಯಾದ್ಯಂತ ಜನಸಾಗರ ಹರಿದು ಬಂದಿತ್ತು. ಮದ್ಯಾಹ್ನ ವಿಸರ್ಜನೆ ಮೆರವಣಿಗೆಗೆ ಅದ್ದೂರಿ ಚಾಲನೆ ದೊರೆತ ನಂತರ, ಸೇರಿದ ಯುವ ಪಡೆ ಡಿಜೆಯ ಅಬ್ಬರಕ್ಕೆ ತಕ್ಕಂತೆ ಕುಣಿಯುತ್ತಾ ಸಾಗಿದರು.

ಪಟ್ಟಣದ ಹಾವಳಿ ಹನುಮಂತದೇವರ ದೇವಸ್ಥಾನದ ಹತ್ತಿರ ಸ್ಥಾಪಿಸಲಾಗಿದ್ದ ಗಣೇಶ ಮೂರ್ತಿ ಅದ್ದೂರಿ ಮೆರವಣಿಗೆಯಲ್ಲಿ ಎಲ್ಲಿ ನೋಡಿದಲ್ಲಿ ಜನವೋ ಜನ. ಎರಡು ದಿನಗಳ ಹಿಂದೆ ಸನಾತನ ಗಣೇಶನ ಮಂಡಳಿಯವರು ನಡೆಸಿದ ಮೆರವಣಿಗೆಯಂತೆಯೇ ಈ ಮೆರವಣಿಗೆಯಲ್ಲಿಯೂ ಭಕ್ತಾದಿಗಳು ಸ್ವಯಂಪ್ರೇರಿತರಾಗಿ ಪಾಲ್ಗೊಂಡಿದ್ದು ವಿಶೇಷವಾಗಿತ್ತು. ದೇವಸ್ಥಾನದಿಂದ ಪ್ರಾರಂಭವಾಗಿ ವಿದ್ಯಾರಣ್ಯ ವೃತ್ತದಿಂದ ಪಂಪವೃತ್ತ, ಕೋರ್ಟ್ ಸರ್ಕಲ್, ಭರಮದೇವರ ವೃತ್ತ, ಪಾದಗಟ್ಟಿ ಮೂಲಕ ಸಾವಿರಾರು ಜನರ ಜಯಘೋಷದ ಮಧ್ಯೆ ಗಣೇಶ ಮೂರ್ತಿಯನ್ನು ವಿಸರ್ಜನೆ ಮಾಡಲಾಯಿತು.

ಪಟ್ಟಣದಲ್ಲಿ ಹೆಚ್ಚು ಜನರು ಸೇರುವ ನಿರೀಕ್ಷೆ ಇರುವ ಈ ಮೆರವಣಿಗೆಯಲ್ಲಿ ಬಹುತೇಕ ಯುವಕರು ವಿಸರ್ಜನೆ ಕಾಲಕ್ಕೆ ಜಮಾಯಿಸಿದ್ದರು.

**ಪೋಲೀಸ್ ಸರ್ಪಗಾವಲಿನಲ್ಲಿ ವಿಸರ್ಜನೆ:** ವಿಸರ್ಜನೆ ಕಾಲಕ್ಕೆ ಸಾವಿರಾರು ಜನರು ಸೇರುವ ನಿರೀಕ್ಷೆಯಿಂದ ಯಾವುದೇ ಗೊಂದಲಕ್ಕೆ ಅವಕಾಶವಾಗದಂತೆ ಪೊಲೀಸ್ ಇಲಾಖೆ ಸಿದ್ಧತೆಗಳನ್ನು ಮಾಡಿಕೊಂಡಿತ್ತು. ವಿವಿಧ ಕಡೆಗಳಿಂದ ಪೊಲೀಸ್ ಸಿಬ್ಬಂದಿಗಳನ್ನು ಕರೆಸಲಾಗಿತ್ತು. ಎಸ್‌ಪಿ ಬಿ.ಎಸ್ ನೇಮಗೌಡ ಅವರ ಮಾರ್ಗದರ್ಶನದಲ್ಲಿ ಮೂವರು ಡಿಎಸ್‌ಪಿ, 9 ಸಿಪಿಐ, 19 ಪಿಎಸ್‌ಐ, 30 ಎಎಸ್‌ಐ, 72 ಹೆಡ್ ಕಾನ್ಸ್‌ಟೇಬಲ್, ಕೆಎಸ್‌ಆರ್‌ಪಿ/ಡಿಆರ್‌ನ 8 ತಂಡಗಳ ವಾಹನಗಳು ಸೇರಿದಂತೆ ನೂರಾರು ಪೊಲೀಸ್ ಸಿಬ್ಬಂದಿಗಳು ಬಂದೋಬಸ್ತ್‌ನಲ್ಲಿ ಪಾಲ್ಗೊಂಡಿದ್ದರು.

ಗಣೇಶ ಮಂಡಳಿಯವರು ಮೆರವಣಿಗೆಯ ಹಿನ್ನೆಲೆಯಲ್ಲಿ ಒಂದೇ ಧಿರಿಸು ಹಾಗೂ ಕೇಸರಿ ಪೇಟ ಧರಿಸಿ ಮೆರವಣಿಗೆಯಲ್ಲಿ ಪಾಲ್ಗೊಂಡು ಮೆರವಣಿಗೆಯ ಆಕರ್ಷಣೆ ಹೆಚ್ಚಿಸಿದರು.

ಆರಂಭದಿಂದಲೇ ಸುಮಾರು 6-7 ಸಾವಿರಕ್ಕೂ ಹೆಚ್ಚು ಜನರು ವಿಸರ್ಜನೆ ಕಾಲದ ಅದ್ದೂರಿ ಮೆರವಣಿಗೆಗೆ ಸಾಕ್ಷಿಯಾದರು.

ಸಂಪೂರ್ಣ ಪೊಲೀಸ್ ಸರ್ಪಗಾವಲಿನಲ್ಲಿಯೇ ಗಣೇಶ ಮೂರ್ತಿಯ ಮೆರವಣಿಗೆ ಸಾಗುವಂತಾಗಿತ್ತು. ಡಿವಾಯ್‌ಎಸ್‌ಪಿ ಎಂ.ಬಿ ಸಂಕದ, ಶಿರಹಟ್ಟಿ ಸಿಪಿಐ ನಾಗರಾಜ ಮಾಡಳ್ಳಿ ಸೇರಿದಂತೆ ಅನೇಕ ಹಿರಿಯ ಅಧಿಕಾರಿಗಳು ಸ್ಥಳದಲ್ಲಿ ಹಾಜರಿದ್ದು ಮಾರ್ಗದರ್ಶನ ನೀಡಿದರು. ಪಟ್ಟಣ ಠಾಣೆಯ ಪಿಎಸ್‌ಐ ಯುಸೆಪ್ ಜಮೂಲಾ ಹಾಗೂ ಇತರೆ ಸ್ಥಳಗಳಿಂದ ಆಗಮಿಸಿದ್ದ ಪಿಎಸ್‌ಐಗಳು ಮತ್ತು ಇತರೆ ಸಿಬ್ಬಂದಿಗಳು ಸಮರ್ಪಕ ಬಂದೋಬಸ್ತ್ ವ್ಯವಸ್ಥೆ ಕೈಗೊಂಡಿದ್ದರು.

# ನಮ್ಮ ತಂಡದ ನಡಿಗೆ ಯುರೋಪ್ ಕಡೆಗೆ: ಬಸವರಾಜ ಹೊರಟ್ಟಿ

■ ವಿಜಯಸಾಕ್ಷಿ ಸುದ್ದಿ, ನವದೆಹಲಿ

ಅಕ್ಟೋಬರ್ 3ರಿಂದ 6ರವರೆಗೆ ಪಶ್ಚಿಮ ಆಫ್ರಿಕಾದ ಅಕ್ರ ನಗರದಲ್ಲಿ ನಡೆದ 66ನೇ ಕಾಮನ್‌ವೆಲ್ತ್ ಪಾರ್ಲಿಮೆಂಟ್ ಸಮ್ಮೇಳನವು ಅತ್ಯಂತ ಯಶಸ್ವಿಯಾಗಿ ಮುಕ್ತಾಯಗೊಂಡಿತು ಎಂದು ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದ್ದಾರೆ.




ಅತ್ಯಂತ ಪುಟ್ಟ ದೇಶವಾದ ಘಾನಾ ಈ ಸಮ್ಮೇಳನವನ್ನು ಅಚ್ಚುಕಟ್ಟಾಗಿ ಸಂಘಟಿಸಿತ್ತು. ಅಲ್ಲಿ ಯಾವುದಕ್ಕೂ ಕೊರತೆಯೆಂಬುದು ಇರಲಿಲ್ಲ. ಒಂದು ಸಮ್ಮೇಳನವನ್ನು ಅದರಲ್ಲೂ ಅಂತಾರಾಷ್ಟ್ರೀಯ ಸಭಾಧ್ಯಕ್ಷರ ಸಮ್ಮೇಳನವನ್ನು ಹೇಗೆ ನಡೆಸಬೇಕು ಎಂಬುದು ಇತರೆ ದೇಶಗಳಿಗೆ ಮಾದರಿಯಾಗುವಂತೆ ಈ ಸಮ್ಮೇಳನದ ಸಂಘಟನೆಯಾದದ್ದು ನಮಗೆಲ್ಲ ಅತ್ಯಂತ ಸಂತೋಷದ ಸಂಗತಿಯಾಗಿದೆ.

ದೇಶವಿದೇಶಗಳಿಂದ ಬಂದಿದ್ದ ನೂರಾರು ಪ್ರತಿನಿಧಿಗಳು ತಮ್ಮ ತಮ್ಮ ದೇಶದ ವೈಶಿಷ್ಟ್ಯತೆಗಳನ್ನು ಎಲ್ಲರೊಂದಿಗೆ ಹಂಚಿಕೊಂಡು ಸಂತಸಪಟ್ಟರು. ಇದರಿಂದ ಬೇರೆ ಬೇರೆ ದೇಶಗಳ ಜನತೆಯ ಆಚಾರ ವಿಚಾರಗಳು, ಆಹಾರ ಕ್ರಮಗಳು, ಪರಿಸರ, ಜನರ ದೈನಂದಿನ ಬದುಕು ಇವೆಲ್ಲವುಗಳನ್ನೂ ಅರಿಯಲು ಈ ಸಮ್ಮೇಳನ ನಮಗೆ ಬಹಳಷ್ಟು ಸಹಾಯ ಮಾಡಿತು.

ದೇಶವಿದೇಶಗಳ ಪ್ರತಿನಿಧಿಗಳ ಒಡನಾಟದೊಂದಿಗೆ ನಮಗೆ ನಾಲ್ಕು ದಿನಗಳು ಹೇಗೆ ಕಳೆದವು ಎಂಬುದೇ ತಿಳಿಯಲಿಲ್ಲ. ನಾವೆಲ್ಲರೂ ಅಷ್ಟೊಂದು ಆತ್ಮೀಯತೆಯಿಂದ ಇದ್ದು, ಹೊಸತನ್ನು ಕಲಿತು ಈ ದೇಶದಿಂದ ಮುಂದಿನ ಪ್ರಯಾಣಕ್ಕಾಗಿ ಯುರೋಪ್ ದೇಶಗಳತ್ತ ಪ್ರಯಾಣ ಬೆಳೆಸಿದ್ದೇವೆ ಎಂದು ಬಸವರಾಜ ಹೊರಟ್ಟಿಯವರು ಮಾಹಿತಿ ಹಂಚಿಕೊಂಡಿದ್ದಾರೆ.

# ರೋಗಗಳ ಬಗ್ಗೆ ನಿರ್ಲಕ್ಷ್ಯ ಸಲ್ಲದು

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಸಾಂಕ್ರಾಮಿಕವಾದ ಕ್ಷಯ(ಟಿ.ಬಿ) ಹಾಗೂ ಎಚ್‌ಐವಿ/ಏಡ್ಸ್ ರೋಗದ ಬಗ್ಗೆ ನಿರ್ಲಕ್ಷ್ಯ ಮಾಡುವದರಿಂದ ಅಪಾಯ ಉಂಟಾಗುವ ಸಂಭವವಿದೆ. ಇಂತಹ ರೋಗಗಳು ಬರದಂತೆ ಜಾಗೃತೆ ವಹಿಸುವದು ಮತ್ತು ರೋಗದ ಲಕ್ಷಣಗಳನ್ನು ತಿಳಿದು ಸಕಾಲಿಕ ಅವಶ್ಯಕ ಚಿಕಿತ್ಸೆ ಪಡೆಯುವದು ಮುಖ್ಯವಾಗಿದೆ ಎಂದು ಆಪ್ತ ಸಮಾಲೋಚಕಿ ಎನ್.ಬಿ ಸೂರಪ್ಪಗೌಡ್ರ ಸಲಹೆ ನೀಡಿದರು.



ಅವರು ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ವಾಹನ ಚಾಲಕರಿಗೆ ಕ್ಷಯ(ಟಿ.ಬಿ) ಹಾಗೂ ಎಚ್‌ಐವಿ/ಏಡ್ಸ್ ರೋಗದ ಬಗ್ಗೆ ಮಾಹಿತಿ ನೀಡಿ, ಕೆಮ್ಮು, ಸೀನು ಮತ್ತು ಉಗುಳುವಾಗ ಹೊರಬರುವ ಸೂಕ್ಷ್ಮ ಜೀವಿಗಳು ಇನ್ನೊಬ್ಬ ಆರೋಗ್ಯವಂತನ ದೇಹವನ್ನು ಪ್ರವೇಶಿಸಿ ಸೋಂಕು ಉಂಟಾಗುತ್ತದೆ. ಅಲ್ಲದೆ ಬೀಡಿ, ಸಿಗರೇಟು, ಮದ್ಯಸೇವನೆ, ಗುಟ್ಕಾ ಇತ್ಯಾದಿಗಳ ಸೇವನೆಯು ಸಹ ಕ್ಷಯ ರೋಗವನ್ನು ಆಹ್ವಾನಿಸಿಕೊಂಡಂತಾಗುತ್ತದೆ.

ಅದೇ ರೀತಿ ಏಡ್ಸ್ ಸಹ ಅಸುರಕ್ಷಿತ ಲೈಂಗಿಕತೆ, ಏಡ್ಸ್ ಇರುವ ವ್ಯಕ್ತಿಗಳು ಬಳಸಿದ ವಸ್ತುಗಳನ್ನು ಬಳಕೆ ಮಾಡುವುದರಿಂದ ಈ ರೋಗವು ವ್ಯಾಪಿಸಬಹುದಾಗಿದೆ. ಒಬ್ಬ ವ್ಯಕ್ತಿಯು ಒಮ್ಮೆ ಎಚ್‌ಐವಿ ಸೋಂಕಿಗೆ ಒಳಗಾದರೆ ಇಡೀ ಜೀವನ ಅದರಿಂದ ರಕ್ಷಣೆ ಪಡೆಯಲು ಹೋರಾಡಬೇಕಾಗುತ್ತದೆ.

ಈ ಹಿನ್ನೆಲೆಯಲ್ಲಿ ವಾಹನ ಚಾಲಕರು ಜಾಗೃತಿ ವಹಿಸುವದು ಅಗತ್ಯವಾಗಿದೆ ಎಂದು ಹೇಳಿದರು.

ವಿಕಲಚೇತನರ ಅವಶ್ಯಕತೆ ಆಧಾರಿತ ಸಾಧನ-ಸಲಕರಣೆಗಳ ತಪಾಸಣಾ ಶಿಬಿರ

# 'ಅರಳು' ಶಾಲೆಯ ಕಾರ್ಯ ಶ್ಲಾಘನೀಯ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದ 'ಅರಳು' ವಿಶೇಷ ಅಗತ್ಯತೆಯುಳ್ಳ ಬುದ್ಧಿಮಾಂದ್ಯ ಮಕ್ಕಳ ವಸತಿ ರಹಿತ ಶಾಲೆಯಲ್ಲಿ ಗುರುವಾರ ಬೆಂಗಳೂರಿನ ರೈಸ್ ಬಯೋನಿಕ್ಸ್ ಇವರ ಸಹಯೋಗದೊಂದಿಗೆ 18 ವರ್ಷದ ಕೆಳಗಿನ ವಿಕಲಚೇತನರ ಅವಶ್ಯಕತೆ ಆಧಾರಿತ ಸಾಧನ-ಸಲಕರಣೆಗಳ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು.




ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ಸದಸ್ಯೆ ಲಲಿತಾ ದಾಸಪ್ಪನವರ ವಹಿಸಿದ್ದರು. ಪಟ್ಟಣದ ಯೂನಿಟಿ ಬ್ಯಾಂಕ್‌ನ ಪ್ರದೀಪ್‌ಕುಮಾರ ಕೊಕಟನೂರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ವಿಶೇಷ ಶಾಲಾ ಮಕ್ಕಳಿಗಾಗಿ ಸೇವೆ ಸಲ್ಲಿಸುತ್ತಿರುವ ಅರಳು ಸಂಸ್ಥೆಯ ಕಾರ್ಯ ಶ್ಲಾಘನೀಯ. ಅತ್ಯಾಧುನಿಕ ತಂತ್ರಜ್ಞಾನದಿಂದ ಮಕ್ಕಳ ಡಿಜಿಟಲ್ ತಪಾಸಣೆ ಮಾಡಿ ವಿಶೇಷ ಮಕ್ಕಳಿಗೆ ಅಗತ್ಯವಾದ ಸಾಧನ-ಸಲಕರಣೆಗಳನ್ನು ಒದಗಿಸುತ್ತಿರುವ ರೈಸ್ ಕಂಪನಿಗೆ ಧನ್ಯವಾದ ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಜಿಲ್ಲಾ ವಿಕಲಚೇತನರ ಕಲ್ಯಾಣಾಧಿಕಾರಿ ಮಹಾಂತೇಶ ಕುರಿ ಮಾತನಾಡಿ, ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ 'ಅರಳು' ಶಾಲೆಯು ಕಳೆದ 9 ವರ್ಷಗಳಿಂದ ಇಲಾಖೆಯ ಅನುದಾನವಿಲ್ಲದೆ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿರುವುದು ಹೆಮ್ಮೆಯ ವಿಚಾರ. ವಿಕಲಚೇತನ ಕ್ಷೇತ್ರದಲ್ಲಿ ಕೆಲಸ ಮಾಡುವದು ಕಷ್ಟದಾಯಕವಾಗಿದ್ದರೂ ಸಹ ಅದನ್ನು ಸೇವೆಯ ರೂಪದಲ್ಲಿ ಮಾಡುತ್ತಿರುವ ಇಲ್ಲಿನ ಸಂಸ್ಥೆಯ ಕಾರ್ಯದರ್ಶಿ ನೀಲಮ್ಮ ದಾಸಪ್ಪನವರ ಅವರ ನೇತೃತ್ವದ ತಂಡದ ಕಾರ್ಯ ಮೆಚ್ಚುವಂಥದ್ದು. ಇಲಾಖೆಯ ವತಿಯಿಂದ ಇಂತಹ ಸಂಸ್ಥೆಗೆ ದೊರೆಯುವ ಸೌಲಭ್ಯವನ್ನು ಒದಗಿಸಿ ಕೊಡುವದಾಗಿ ಭರವಸೆ ನೀಡಿದರು.

ಮುಖ್ಯ ಅತಿಥಿಗಳಾಗಿ ಡಾ.ರಾಘವೇಂದ್ರ ಪಾಟೀಲ, ರೈಸ್ ಬಯೋನಿಕ್ಸ್ ಸಿಇಒ ಅರುಣ ಚೆರೀ, ಡಾ.ಪವನ ಮಹೇಂದ್ರಕರ, ಶಂಕರ ಬ್ಯಾಡಗಿ, ಎಂ.ಕೆ ಕಳ್ಳಿಮಠ, ಸಂಸ್ಥೆಯ ಎಲ್ಲ ಸಿಬ್ಬಂದಿಗಳು, ಜಿಲ್ಲಾ ವಿಕಲಚೇತನರ ಪುನರ್ವಸತಿ ಕೇಂದ್ರ ಗದಗನ ಕಾರ್ಯಕ್ರಮ ಸಂಯೋಜಕ ಪ್ರಕಾಶ ಗಾಣಿಗೇರ ಮುಂತಾದವರು ಆಗಮಿಸಿದ್ದರು.

ಲಕ್ಷ್ಮೇಶ್ವರ ಸೇರಿದಂತೆ 27 ಗ್ರಾಮಗಳಿಂದ 98ಕ್ಕೂ ಹೆಚ್ಚು ಮಕ್ಕಳು ಈ ಶಿಬಿರದ ಪ್ರಯೋಜನ ಪಡೆದುಕೊಂಡರು. ಕಾರ್ಯದರ್ಶಿ ನೀಲಮ್ಮ ದಾಸಪ್ಪನವರ ಪ್ರಾಸ್ತಾವಿಕವಾಗಿ ಮಾತನಾಡಿದರು.

# ಚಂದ್ರಯಾನ-3 ಯಶಸ್ವಿ, ಹೊಸ ಅನ್ವೇಷಣೆಗೆ ಹುರುಪು

▸▸ ಮೊದಲನೇ ಪುಟದಿಂದ

ಯಶಸ್ವಿಯಾಗಿ ಜಗತ್ತಿಗೆ ಭಾರತದ ವಿಜ್ಞಾನಿಗಳ ಸಾಮರ್ಥ್ಯ ಎಂತಹದ್ದು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ ಮುದಕ್ಕಣ್ಣನವರ, ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಎಂ.ಎ ರಡ್ಡೇರ, ಕೃಷಿ ಇಲಾಖೆಯ ಜಂಟಿ ನಿರ್ದೇಶಕಿ ತಾರಮಣಿ ಹಾಗೂ ಜಿಲ್ಲಾಮಟ್ಟದ ಅಧಿಕಾರಿಗಳು, ವಿವಿಧ ಶಾಲಾ ಮಕ್ಕಳು, ಶಿಕ್ಷಕರು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಇಸ್ರೋ ಸಂಸ್ಥೆಯ ವಿಜ್ಞಾನಿ ಸುಧೀಂದ್ರ ಬಿಂದಗಿ ದಂಪತಿಗಳಿಗೆ ಜಿಲ್ಲಾಡಳಿತದಿಂದ ಸನ್ಮಾನಿಸಲಾಯಿತು.

ಪುರಸಭೆಯ ಸಾಮಾನ್ಯ ಸಭೆಯಲ್ಲಿ ಅಧಿಕಾರಿಗಳ ಬಗ್ಗೆ ಶಾಸಕ ಡಾ. ಚಂದ್ರು ಲಮಾಣಿ ಅಸಮಾಧಾನ

# ಯೋಗ್ಯತೆಯ ಬಗ್ಗೆ ಚರ್ಚಿಸುವ ಮೊದಲು ಎಚ್ಚೆತ್ತುಕೊಳ್ಳಿ




■ ವಿಜಯಸಾಕ್ಷಿ ಸುದ್ದಿ, ಮುಂಡರಗಿ

ಸ್ಥಳೀಯ ಪುರಸಭೆಯ ಸಭಾ ಭವನದಲ್ಲಿ ಶಾಸಕ ಡಾ. ಚಂದ್ರು ಲಮಾಣಿ ಅಧ್ಯಕ್ಷತೆಯಲ್ಲಿ ಶನಿವಾರ ಸಾಮಾನ್ಯ ಸಭೆ ನಡೆಯಿತು. ತಹಸೀಲ್ದಾರ ಧನಂಜಯ್ ಎಂ ಮತ್ತು ಸಹಾಯಕ ಆಯುಕ್ತ ವೇಂಕಟೇಶ ನಾಯ್ಕ ನೇತೃತ್ವದಲ್ಲಿ ಕುಂದು-ಕೊರತೆಗಳ ಬಗ್ಗೆ ಚರ್ಚಿಸಲಾಯಿತು.

ಪುರಸಭೆಯ ವ್ಯಾಪ್ತಿಯ ವಾರ್ಡ್‌ಗಳಲ್ಲಿ ಮೂಲಸೌಕರ್ಯಗಳ ಕೊರತೆಯಿದ್ದು, ಬೀದಿ ದೀಪ, ಗಟಾರು ಸ್ವಚ್ಛತೆ, ಕುಡಿಯುವ ನೀರಿನ ಸೌಲಭ್ಯಗಳನ್ನು ಸಮರ್ಪಕವಾಗಿ ನಿರ್ವಹಿಸಬೇಕು. ಕಛೇರಿಗೆ ಬರುವ ಜನರನ್ನು ವಾರಗಟ್ಟಲೆ ಸತಾಯಿಸಬೇಡಿ, ಸಾರ್ವಜನಿಕರು ನಮ್ಮ ಯೋಗ್ಯತೆ ಬಗ್ಗೆ ಚರ್ಚಿಸುವ ಮೊದಲು ಜಾಗ್ರತೆಯಿಂದ ಕೆಲಸ ಮಾಡಿ ಎಂದು ಪುರಸಭೆ ಅಧಿಕಾರಿಗಳನ್ನು ಶಾಸಕರು ತರಾಟೆಗೆ ತೆಗೆದುಕೊಂಡು.

ಪುರಸಭೆ ವ್ಯಾಪ್ತಿಯಲ್ಲಿನ ಉದ್ಯಾನವನ, ಆಟದ ಮೈದಾನ ಮತ್ತು ಬಯಲು ಸ್ಥಳಗಳ ವಿವರ, ಸಿ.ಎ ನಿವೇಶನ, ಅಧಿಕೃತ ಬಡಾವಣೆ ಮತ್ತು ಅನಧಿಕೃತ ಬಡಾವಣೆಗಳ ಸಂಪೂರ್ಣ ಮಾಹಿತಿ ಇಲ್ಲದಿದ್ದರೆ ಸಾರ್ವಜನಿಕರ ಆಸ್ತಿಯನ್ನು ರಕ್ಷಣೆ ಮಾಡುವ ಕ್ರಮವಾದರೂ ಹೇಗೆ ಎಂದು ಶಾಸಕರು ಅಸಮಾಧಾನ ವ್ಯಕ್ತಪಡಿಸಿದರು.

ಮುಖ್ಯಾಧಿಕಾರಿಗಳ ಮೇಲೆ ಈಗಾಗಲೇ ಸಾಕಷ್ಟು ದೂರುಗಳು ಬಂದಿದ್ದು, ಅಧಿಕಾರವನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದೀರಿ ಎಂದು ಮುಖ್ಯಾಧಿಕಾರಿ ಎಂ.ಎ ನೂರಹಲ್ಲಖಾನ ವಿರುದ್ಧ ಸಭೆಯಲ್ಲಿ ಸದಸ್ಯರ ಎದುರು ಗುಡುಗಿದರು.

ಪುರಸಭೆ ಸದಸ್ಯೆ ರಿಯಾನ ಬೆಗಾಂ ಕೆಲೂರ ಮಾತನಾಡಿ, ನಗರದ ಅಭಿವೃದ್ಧಿಗೆ ಸಾಕಷ್ಟು ಹಣ ಬಿಡಗಡೆಯಾಗಿದೆ. ಆದರೆ ಮಹಿಳೆಯರಿಗಾಗಿ ಹೊಲಿಗೆ ತರಬೇತಿ, ಸ್ವ ಉದ್ಯೋಗ ತರಬೇತಿಗಳು ಲಭ್ಯವಾಗುತ್ತಿಲ್ಲ. ಈ ಬಗ್ಗೆ ಸಾರ್ವಜನಿಕರಿಗೆ ನಾವು ಉತ್ತರ ನೀಡಲಾಗದ ಪರಿಸ್ಥಿತಿಯಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪುರಸಭೆ ಸದಸ್ಯ ನಾಗರಾಜ ಹೊಂಬಳಗಟ್ಟಿ ಮಾತನಾಡಿದರು. ಈ ಸಂದರ್ಭದಲ್ಲಿ ಪುರಸಭೆ ಸದಸ್ಯರಾದ ಲಿಂಗರಾಜಗೌಡ ಪಾಟೀಲ, ದೇವಪ್ಪ ಚಿಕ್ಕಣನವರ, ನಾಗೇಶ ಹುಬ್ಬಳ್ಳಿ, ಪವನ ಮೇಟಿ, ಪ್ರಲ್ಹಾದ ಹೊಸಮನಿ, ತಿ.ಪಿ ದಂಡಿನ, ಜ್ಯೋತಿ ಹಾನಗಲ್, ಪ್ರಕಾಶ ಹಲವಾಗಲಿ, ರಾಜಭಕ್ಷಿ ಬೆಟಗೇರಿ, ರೈಮಾನಸಾಬ ಮಲ್ಲನಕೇರಿ, ರಫಿಕ್ ಮುಲ್ಲಾ, ರುಕ್ಮಿಣಿ ಸುಣಗಾರ, ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಹಾಜರಿದ್ದರು.

ಗ್ರಾಹಕರಿಗೆ ಮಾಹಿತಿ ನೀಡುವ ಬದಲು ಲಂಚದ ಬೇಡಿಕೆ ಆರೋಪ

# ಫೀಲ್ಡ್ ಆಫೀಸರ್ ಮೇಲೆ ಶಿಸ್ತು ಕ್ರಮಕ್ಕೆ ಒತ್ತಾಯ



■ ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ಪಟ್ಟಣದ ಕುಷ್ಟಗಿ ರಸ್ತೆಯ ಎಸ್‌ಬಿಐ ಬ್ಯಾಂಕ್‌ನಲ್ಲಿ ಫೀಲ್ಡ್ ಆಫೀಸರ್ ಕಾರ್ಯ ನಿರ್ವಹಿಸುತ್ತಿರುವ ಅರಣು ಭಂಢಾರಿ ಅವರು ಸಾಲ ಪಡೆಯಲು ಆಗಮಿಸುವ ಗ್ರಾಹಕರನ್ನು ನಿಂದಿಸುವ ರೀತಿಯಲ್ಲಿ ವರ್ತಿಸುತ್ತಿದ್ದು, ಅವರ ಮೇಲೆ ಶಿಸ್ತು ಕ್ರಮಕ್ಕೆ ಬ್ಯಾಂಕ್‌ನ ಹಿರಿಯ ಅಧಿಕಾರಿಗಳು ಮುಂದಾಗಬೇಕು ಎಂದು ಜಯ ಕರ್ನಾಟಕ ಸಂಘಟನೆಯ ತಾಲೂಕಾಧ್ಯಕ್ಷ ಕಳಕಪ್ಪ ಪೋತಾ ಹೇಳಿದರು.

ತಾಲೂಕಿನ ಬಡ ಕೂಲಿ ಕಾರ್ಮಿಕರು ಮತ್ತು ರೈತರು ಸಾಲ ಪಡೆಯಲು ಹಾಗೂ ಸಾಲ ಮಂಜೂರಾತಿ ಬಗ್ಗೆ ಸಮರ್ಪಕ ಮಾಹಿತಿ ನೀಡದ ಸ್ಥಳೀಯ ಎಸ್‌ಬಿಐ ಬ್ಯಾಂಕ್‌ನ ಫೀಲ್ಡ್ ಆಫೀಸರ್ ಮೇಲೆ ಸೂಕ್ತ ಕ್ರಮಕ್ಕೆ ಒತ್ತಾಯಿಸಿ ನಡೆಸಿದ ಪ್ರತಿಭಟನೆಯಲ್ಲಿ ಅವರು ಮಾತನಾಡಿದರು.

ಈ ಅಧಿಕಾರಿ ಸಾಮಾನ್ಯ ಗ್ರಾಹಕರಿಗೆ ಮಾಹಿತಿ ನೀಡುವ ಬದಲು ಲಂಚದ ಬೇಡಿಕೆಯನ್ನು ಇಡುತ್ತಿದ್ದಾರೆ ಎಂದು ದೂರಿದ ಅವರು, ಸಾಲದ ಬಗ್ಗೆ ವಿಚಾರಿಸಲು ಬರುವ ಗ್ರಾಹಕರ ಮನಸ್ಸಿಗೆ ನೋವಾಗುವ ರೀತಿಯಲ್ಲಿ ಏಕ ವಚನದಲ್ಲಿ ಮಾತನಾಡುತ್ತಾರಲ್ಲದೆ, ಯಾರಿಗೂ ಅಂಜುವದಿಲ್ಲ, ಯಾರ ಬಳಿಯಾದರೂ ಹೇಳಿ, ಶ್ರೀಮಂತರಿಗೆ ಮಾತ್ರ ಸಾಲವನ್ನು ನೀಡುತ್ತೇವೆ ಎಂದು ಅಸಡ್ಡೆಯ ಹೇಳಿಕೆಗಳನ್ನು ನೀಡುತ್ತಾ ಬ್ಯಾಂಕಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಬ್ಯಾಂಕಿನ ಎದುರು ಸಂಘಟನೆಯ ಕಾರ್ಯಕರ್ತರು ಫೀಲ್ಡ್ ಆಫೀಸರ್ ವಿರುದ್ಧ ಘೋಷಣೆಗಳನ್ನು ಕೂಗಿ ಪ್ರತಿಭಟನೆ ನಡೆಸಿದ ಬಳಿಕ, ಬ್ಯಾಂಕಿನ ಸ್ಥಳೀಯ ವ್ಯವಸ್ಥಾಪಕ ಇಮ್ತಿಯಾಜ್ ಅನ್ಸಾರಿ ಸಂಘಟನೆಯ ಕಾರ್ಯಕರ್ತರಿಂದ ಮನವಿ ಸ್ವೀಕರಿಸಿದರು. ಈ ವೇಳೆ ಶರಣು ಹಲಗಿ, ಮಹ್ಮದಗೌಸ್ ಅಕ್ಕಿ, ಉಮೇಶ ಕಲಮಶೆಟ್ಟಿ, ಮುತ್ತಣ್ಣ ಹಗಲದಾಳ, ರಾಘವೇಂದ್ರ ಹೂಗಾರ, ಖಾಸೀಂಸಾಬ ಮುಚ್ಚಾಲಿ, ಬಸವರಾಜ ಪೂಜಾರ, ಸುನೀಲ್ ಮಹೇಂದ್ರಕರ, ಕರಿಯಪ್ಪ ಮಾದರ, ಅಜ್ಜಪ್ಪ ಹಿರೇಮನಿ, ಅನ್ವರ ನರೇಗಲ್, ವಾಸೀಂ ಬಂಗಾರಗುಂಡಿ ಸೇರಿ ಇತರರು ಇದ್ದರು.

ಒಂದು ತಿಂಗಳ ಹಿಂದೆ ನೇಕಾರರ ಸಾಲ ಮಂಜೂರಾತಿ ಬಗ್ಗೆ ಸಂಘಟನೆಯ ಕಾರ್ಯಕರ್ತರು ಬ್ಯಾಂಕ್‌ನ ಫೀಲ್ಡ್ ಆಫೀಸರ್ ಭಂಡಾರಿ ಅವರನ್ನು ಸಂಪರ್ಕಿಸಿ ಸಾಲ ಮಂಜೂರಾತಿ ಸೇರಿ ಇನ್ನಿತರ ಮಾಹಿತಿಯನ್ನು ಕೇಳಿದರೆ ಸೂಕ್ತ ಉತ್ತರವನ್ನು ನೀಡಲು ಮುಂದಾಗಲಿಲ್ಲ. ಅಲ್ಲದೆ ಸಾಲದ ಬಗ್ಗೆ ಕೇಳಿದ ಪ್ರಶ್ನೆಗಳಿಗೆ ಸಮರ್ಪಕ ಉತ್ತರಗಳನ್ನು ನೀಡುವ ಬದಲು ಉಢಾಪೆಯ ಉತ್ತರಗಳನ್ನು ನೀಡುತ್ತಾ ಬೇಜವಾಬ್ದಾರಿ ವರ್ತನೆ ತೋರುತ್ತಿದ್ದಾರೆ. ಹೀಗಾಗಿ ಬ್ಯಾಂಕಿನ ಮೇಲಾಧಿಕಾರಿಗಳು ಇವರ ಮೇಲೆ 8 ದಿನಗಳ ಒಳಗಾಗಿ ಸೂಕ್ತ ಕ್ರಮ ಕೈಗೊಳ್ಳಲು ಮುಂದಾಗದಿದ್ದರೆ ಬ್ಯಾಂಕ್ ಮುಂದೆ ಪ್ರತಿಭಟನೆಯನ್ನು ನಡೆಸಲಾಗುವುದು ಎಂದು ಎಚ್ಚರಿಸಿದರು.

## ವರುಣನ ಕೃಪೆಗಾಗಿ ಪರ್ಜನ್ಯ ಯಾಗ



■ವಿಜಯಸಾಕ್ಷಿ ಸುದ್ದಿ, ಗದಗ

ಸಮಿಪದ ತಿಮ್ಮಾಪೂರ ಗ್ರಾಮದ ಶ್ರೀ ಮಾರುತೇಶ್ವರ ದೇವಸ್ಥಾನದಲ್ಲಿ ಮಳೆರಾಯನ ಕೃಪೆಗಾಗಿ ಶನಿವಾರ ಮುಂಜಾನೆ ಪರ್ಜನ್ಯ ಯಾಗವನ್ನು ಗಂಗಾಧರ ಸಂಗಮ ಗೂರುಜಿ ಸಮ್ಮುಖದಲ್ಲಿ ನೆರವೇರಿಸಲಾಯಿತು.

ಯಾಗದ ಹಿನ್ನೆಲೆಯಲ್ಲಿ ಶ್ರೀ ಮಾರುತೇಶ್ವರ ದೇವಸ್ಥಾನವನ್ನು ಹೂ ಮಾಲೆ, ತಳಿರು ತೋರಣಗಳಿಂದ ಅಲಂಕರಿಸಲಾಗಿತ್ತು. ಪರ್ಜನ್ಯ ಯಾಗವನ್ನು ಕಂಚಿ ಕಾಳ ಹಸ್ತಿ ಗುರುಪೀಠದ ಮಹೇಶ ಜೋಶಿ, ಗಣೇಶ ಘನಪಾಠ ಗೂರುಜಿ, ಯೋಗೇಶ ಜೋಶಿ ಇವರು ನೆರವೇರಿಸಿದರು.

ಈ ಸಂದರ್ಭದಲ್ಲಿ ಗ್ರಾಮದ ಹಿರಿಯರಾದ ರಾಮನಗೌಡ ದೇಸಾಯಿ, ಮಲ್ಲಪ್ಪ ಅಂಗಡಿ, ಯಲ್ಲಪ್ಪ ಎಚ್.ಬಾಬರಿ, ಶರಣಪ್ಪ ಜೋಗಿನ, ಸಂಗಪ್ಪ ಮಳ್ಳಿ, ಬಸಪ್ಪ ಸತ್ಯಪ್ಪನವರ, ಮಾರುತಿ ಕಟಗಿ, ಅರ್ಚಕರಾದ ಚಂದ್ರಶೇಖರ ಪೂಜಾರ, ಶ್ರೀಕಾಂತ ಪೂಜಾರ, ಶಂಕ್ರಪ್ಪ ಪೂಜಾರ, ವೆಂಕಟೇಶ ಪೂಜಾರ ಹಾಗೂ ಭಕ್ತಾದಿಗಳ ಪಾಲ್ಗೊಂಡಿದ್ದರು.



ಜಿಲ್ಲಾ ಮಟ್ಟದ ಪ್ರಾಥಮಿಕ ವಿಭಾಗದ ಥ್ರೋಬಾಲ್ ಪಂದ್ಯದಲ್ಲಿ ಬಟ್ಟೂರಿನ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಬಾಲಕಿಯರು ಪ್ರಥಮ ಸ್ಥಾನ ಪಡೆದು ವಿಭಾಗ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ದೈಹಿಕ ಶಿಕ್ಷಕ ಎಂ.ಎಸ್ ಕಾಳೆ ಸೇರಿದಂತೆ ಶಿಕ್ಷಕರು, ವಿದ್ಯಾರ್ಥಿನಿಯರಿದ್ದರು.

ಲಿಂ.ಶ್ರೀ ಸೋಮಶೇಖರ ಶಿವಾಚಾರ್ಯ ಸ್ವಾಮಿಗಳ ಪುಣ್ಯ ಸ್ಮರಣೋತ್ಸವದಲ್ಲಿ ಶ್ರೀ ರಂಭಾಪುರಿ ಜಗದ್ಗುರುಗಳು

# ಸುಜ್ಞಾನದೆಡೆಗೆ ಕರೆದೊಯ್ಯುವ ಶಕ್ತಿಯೇ ಶ್ರೀ ಗುರು

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಜೀವನವೊಂದು ಸುಂದರವಾದ ಸಂತೆ. ಸಂತೆಯೊಳಗೆ ನೂರಾರು ಚಿಂತೆ. ಆದರೂ ನಗು ನಗುತ್ತಾ ಬಾಳಬೇಕು. ಗುರು ಎಂದರೆ ವ್ಯಕ್ತಿಯಲ್ಲ. ಅದೊಂದು ಮಹಾನ್ ಶಕ್ತಿ. ಅಜ್ಞಾನ ಕಳೆದು ಸುಜ್ಞಾನದೆಡೆಗೆ ಕರೆದುಕೊಂಡು ಹೋಗುವ ಶಕ್ತಿಯೇ ಶ್ರೀ ಗುರು ಎಂದು ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಶನಿವಾರ ನರೇಗಲ್ಲ ರಸ್ತೆಯಲ್ಲಿರುವ ಅಬ್ಬಿಗೇರಿ ಹಿರೇಮಠದ ಶ್ರೀ ಜಗದ್ಗುರು ರೇಣುಕಾಚಾರ್ಯ ಸಾಂಸ್ಕೃತಿಕ ಭವನದಲ್ಲಿ ಜರುಗಿದ ಲಿಂ.ಶ್ರೀ ಸೋಮಶೇಖರ ಶಿವಾಚಾರ್ಯ ಸ್ವಾಮಿಗಳವರ 3ನೇ ವರುಷದ ಪುಣ್ಯ ಸ್ಮರಣೋತ್ಸವ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಲಿಂ. ಸೋಮಶೇಖರ ಶಿವಾಚಾರ್ಯ ಸ್ವಾಮಿಗಳು ಸದಾ ಕ್ರಿಯಾಶೀಲರಾಗಿ ಬಾಳಿದವರು. ಧರ್ಮ ಮುಖಿಯಾಗಿ ಮತ್ತು ಸಮಾಜ ಮುಖಿಯಾಗಿ ಕಾರ್ಯ ನಿರ್ವಹಿಸಿದ್ದನ್ನು ಎಂದಿಗೂ ಮರೆಯಲಾಗದು ಎಂದ ಅವರು, ಅಕ್ಟೋಬರ್ 15ರಿಂದ 24ರವರೆಗೆ ರಾಯಚೂರ ಜಿಲ್ಲೆ




ಲಿಂಗಸುಗೂರಿನಲ್ಲಿ ಜರುಗುವ ಶ್ರೀ ರಂಭಾಪುರಿ ಜಗದ್ಗುರುಗಳ 32ನೇ ವರ್ಷದ ದಸರಾ ಧರ್ಮ ಸಮಾರಂಭದಲ್ಲಿ ಎಲ್ಲ ಭಕ್ತರು ಭಾಗವಹಿಸಬೇಕೆಂದು ತಿಳಿಸಿದರು.

ಸಮಾರಂಭ ಉದ್ಘಾಟಿಸಿದ ರೋಣ ಕ್ಷೇತ್ರದ ಶಾಸಕ ಜಿ.ಎಸ್ ಪಾಟೀಲ ಮಾತನಾಡಿ, ಲಿಂಗೈಕ್ಯ ಸೋಮಶೇಖರ ಶಿವಾಚಾರ್ಯರ ಶಿಷ್ಯ ವಾತ್ಸಲ್ಯ ಬಹು ದೊಡ್ಡದು. ಮನುಷ್ಯ ತುಳಿದು ಬದುಕುವುದಕ್ಕಿಂತ ತಿಳಿದು ಬದುಕುವುದು ಶ್ರೇಷ್ಠ. ಅವರ ಆದರ್ಶಗಳು ನಮ್ಮೆಲ್ಲರ ಬಾಳಿಗೆ ಬೆಳಕು ತೋರಲೆಂದ ಅವರು 2024ನೇ ಸಾಲಿನ ಶ್ರೀ ರಂಭಾಪುರಿ ಜಗದ್ಗುರುಗಳವರ ಶರನ್ನವರಾತ್ರಿ ದಸರಾ ಧರ್ಮ ಸಮ್ಮೇಳನವನ್ನು ಅಬ್ಬಿಗೇರಿಯಲ್ಲಿ ಅದ್ದೂರಿಯಾಗಿ ಆಚರಿಸುವ ಸಂಕಲ್ಪ ನಮ್ಮೆಲ್ಲರದು ಆಗಲೆಂದು ಆಶಿಸಿದರು.

ನೇತೃತ್ವ ವಹಿಸಿದ ಅಬ್ಬಿಗೇರಿ ಹಿರೇಮಠ ಮತ್ತು ಸಿದ್ಧರಬೆಟ್ಟ ಕ್ಷೇತ್ರದ ವೀರಭದ್ರ ಶಿವಾಚಾರ್ಯ ಸ್ವಾಮಿಗಳು ಪ್ರಾಸ್ತಾವಿಕವಾಗಿ ಮಾತನಾಡಿ, ವಿನಯ, ಸರಳತೆ, ಸಹಾನುಭೂತಿ ಹಾಗೂ ಸ್ವಾಭಿಮಾನದಂಥ ವೈಶಿಷ್ಟ್ಯಗಳನ್ನು ಹೊಂದಿರುವಾತನೇ ನಿಜವಾದ ಸಂಪನ್ಮೂಲ ವ್ಯಕ್ತಿ. ದೂರ ದೂರ ನೆಟ್ಟ ಗಿಡಗಳು ಬೆಳೆದಂತೆ ಹತ್ತಿರವಾಗುತ್ತವೆ. ಆದರೆ ಮನುಷ್ಯ ಬೆಳೆಯುತ್ತಿದ್ದಂತೆ ಅವರ ಮನಸ್ಸುಗಳು ದೂರವಾಗುತ್ತಾ ಹೋಗುತ್ತವೆ. ಲಿಂ.ಸೋಮಶೇಖರ ಶ್ರೀಗಳವರ ಸತ್ಯ ಸಂಕಲ್ಪಗಳನ್ನು ಸಾಕಾರಗೊಳಿಸುವುದೇ ನಮ್ಮೆಲ್ಲರ ಗುರಿಯಾಗಬೇಕಾಗಿದೆ. ಈ ಭಾಗದ ಎಲ್ಲ ಭಕ್ತರ ಸಹಕಾರವಿದ್ದರೆ ಯಾವುದೂ ಅಸಾಧ್ಯ ಇಲ್ಲವೆಂದರು.

ಸಮ್ಮುಖ ವಹಿಸಿದ ಸೂಡಿ ಜುಕ್ತಿ ಹಿರೇಮಠದ ಡಾ. ಕೊಟ್ಟೂರು ಬಸವೇಶ್ವರ ಶಿವಾಚಾರ್ಯರು ಮಾತನಾಡಿ, ಭಾರವಿಲ್ಲದ ನೋಟಿಗೆ ಇರುವ ಬೆಲೆ ಭಾವನೆಗಳಿರುವ ಮನುಷ್ಯನಿಗೆ ಇಲ್ಲ. ಬದುಕಿನ ಪುಸ್ತಕ ಎಷ್ಟೇ ಹಳೆಯದಾದರೂ ನೆನಪಿನ ಪುಟಗಳು ಯಾವಾಗಲೂ ಹೊಸದಾಗಿರುತ್ತವೆ. ಲಿಂಗೈಕ್ಯ ಶ್ರೀಗಳವರ ಸಾಧನೆ, ಪ್ರಯತ್ನ ಮರೆಯಲು ಸಾಧ್ಯವಾಗದೆಂದರು.

ಅಧ್ಯಕ್ಷತೆ ವಹಿಸಿದ ಅ.ಭಾ.ವೀ ಶಿವಾಚಾರ್ಯ ಸಂಸ್ಥೆ ಅಧ್ಯಕ್ಷರಾದ ಮುಕ್ತಿಮಂದಿರ ಕ್ಷೇತ್ರದ ವಿಮಲ ರೇಣುಕ ಮುಕ್ತಿಮುನಿ ಶಿವಾಚಾರ್ಯರು ಮಾತನಾಡಿ, ಸಂಪತ್ತು ಉಳ್ಳವನು ಶ್ರೀಮಂತನಲ್ಲ. ಸಂತಸ ಉಳ್ಳವನೇ ನಿಜವಾದ ಶ್ರೀಮಂತ. ದೇಹ ಶುದ್ಧಿ, ಭಾವ ಶುದ್ಧಿ ಹೊಂದಿ ಕಾರ್ಯ ಮಾಡಿದ ಸೋಮಶೇಖರ ಶಿವಾಚಾರ್ಯರ ನೆನಹು ಭಕ್ತರಿಗೆ ಸದಾ ಹಸಿರು ಎಂದರು.

ಗ್ರಾ.ಪಂ ಅಧ್ಯಕ್ಷ ನೀಲಪ್ಪ ದ್ವಾಸಲ, ಉಪಾಧ್ಯಕ್ಷೆ ರೇಣವ್ವ ಹಳ್ಳಿ ಮೊದಲ್ಗೊಂಡು ಹಲವಾರು ಗಣ್ಯರಿಗೆ ಮತ್ತು ದಾನಿಗಳಿಗೆ ಶ್ರೀ ರಂಭಾಪುರಿ ಜಗದ್ಗುರುಗಳು ಗುರುರಕ್ಷೆಯಿತ್ತು ಶುಭ ಹಾರೈಸಿದರು.

ಪುಣ್ಯ ಸ್ಮರಣೋತ್ಸವ ನಿಮಿತ್ತ ಲಿಂಗೈಕ್ಯ ಶ್ರೀಗಳ ಗದ್ದುಗೆಗೆ ರುದ್ರಾಭಿಷೇಕ ಪೂಜೆ, ಶಿವದೀಕ್ಷಾ ಅಯ್ಯಾಚಾರ ಜರುಗಿತು. ಊರಿನ ಹಿರೇಮಠದಿಂದ ನರೇಗಲ್ಲ ರಸ್ತೆಯಲ್ಲಿರುವ ಅಬ್ಬಿಗೇರಿ ನೂತನ ಹಿರೇಮಠದವರೆಗೆ ಲಿಂ.ಸೋಮಶೇಖರ ಪಲ್ಲಕ್ಕಿ ಮಹೋತ್ಸವ ವಾದ್ಯ ವೈಭವ, ಕಳಸ ಕನ್ನಡಿಯೊಂದಿಗೆ ಸಂಭ್ರಮದಿಂದ ಜರುಗಿತು. ಸಮಾರಂಭದ ನಂತರ ಅನ್ನದಾಸೋಹ ಜರುಗಿತು.

ಸಮಾರಂಭದಲ್ಲಿ ನರೇಗಲ್ಲ ಹಿರೇಮಠದ ಮಲ್ಲಿಕಾರ್ಜುನ ಶಿವಾಚಾರ್ಯರು, ಚಳಗೇರಿ ಹಿರೇಮಠದ ವೀರಸಂಗಮೇಶ್ವರ ಶಿವಾಚಾರ್ಯರು, ಸಂಗೊಳ್ಳಿ ಹಿರೇಮಠದ ಗುರುಲಿಂಗ ಶಿವಾಚಾರ್ಯರು, ಯಲಬುರ್ಗ ಬಸವಲಿಂಗ ಶಿವಾಚಾರ್ಯರು, ಜಕ್ಕಲಿ ಹಿರೇಮಠದ ವಿಶ್ವಾರಾಧ್ಯ ಶಿವಾಚಾರ್ಯರು ಪಾಲ್ಗೊಂಡಿದ್ದರು.

> ಜನ ಮೆಚ್ಚುವಂತಹ ಕೆಲಸ ದೊಡ್ಡದಾದರೆ, ದೈವ ಮೆಚ್ಚುವಂತಹ ಕೆಲಸ ಅದಕ್ಕಿಂತಲೂ ದೊಡ್ಡದು. ಕನ್ನಡಿ ಸ್ವಚ್ಛವಾಗಿದ್ದರೆ ಪ್ರತಿಬಿಂಬ ಸುಂದರವಾಗಿ ಕಾಣುತ್ತದೆ. ಹಾಗೆಯೇ ಮನಸ್ಸು ಸ್ವಚ್ಛವಾಗಿದ್ದರೆ ಇಡೀ ಜಗತ್ತೇ ಸುಂದರವಾಗಿ ಕಾಣುತ್ತದೆ. ಸಮಯ, ಸ್ನೇಹ ಮತ್ತು ಆರೋಗ್ಯ ಇವುಗಳಿಗೆ ಬೆಲೆ ಕಟ್ಟಲಾಗದು. ಕಾಯ ಕಣ್ಮರೆಯಾದರೂ ಮಾಡಿದ ಸತ್ಕಾರ್ಯಗಳು ಶಾಶ್ವತ. ಬದುಕಲು ಹಣ ಬೇಕು. ಹೊಂದಿಕೊಂಡು ಬಾಳಲು ಗುಣ ಬೇಕು.
>
> **– ಡಾ.ವೀರಸೋಮೇಶ್ವರ ಜಗದ್ಗುರುಗಳು.**
>
> ಶ್ರೀ ರಂಭಾಪುರಿ ಪೀಠ, ಬಾಳೆಹೊನ್ನೂರು.

## ಅಕ್ಷರ ದಾಸೋಹ ದಾಖಲೆಗಳ ಪರಿಶೀಲನೆ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದ ಸರ್ಕಾರಿ ಮಾದರಿ ಕನ್ನಡ ಹೆಣ್ಣು ಮಕ್ಕಳ ಪ್ರಾಥಮಿಕ ಶಾಲೆ ಸೇರಿ ಹಲವು ಶಾಲೆಗಳಿಗೆ ಪಿಎಂ ಪೋಷಣ ಶಕ್ತಿ ನಿರ್ಮಾಣ್ ಯೋಜನೆಯ ರಾಜ್ಯ ಸಹಾಯಕ ನಿರ್ದೇಶಕಿ ನಾಗರತ್ನ ಅವರು ಭೇಟಿ ನೀಡಿ, ಅಕ್ಷರ ದಾಸೋಹಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದರು.

ಅಕ್ಷರ ದಾಸೋಹ ಕೊಠಡಿ, ಆಹಾರ ಧಾನ್ಯಗಳು, ಕುಡಿಯುವ ನೀರು, ಶಾಲಾ ಕೈತೋಟ ಮತ್ತು ಮಕ್ಕಳ ವೈದ್ಯಕೀಯ ದಾಖಲೆಗಳನ್ನು ಪರಿಶೀಲನೆ ನಡೆಸಿ ಸಲಹೆ-ಸೂಚನೆ ನೀಡಿದರು.

ಮುಂಡರಗಿ ಅಕ್ಷರ ದಾಸೋಹ ಸಹಾಯಕ ನಿರ್ದೇಶಕಿ ರಂಜನಾ ತಳಗೇರಿ ಹಾಗೂ ಶಿರಹಟ್ಟಿ ತಾಲೂಕಿನ ಎಚ್.ಎಸ್ ರಾಮನಗೌಡ, ಮುಖ್ಯ ಶಿಕ್ಷಕ ಬಿ.ಎಂ ಕುಂಬಾರ, ಎಸ್.ಎಸ್ ಜಿರಂಕಳಿ, ಎನ್.ಎಸ್ ಬಂಕಾಪುರ, ಎಚ್.ಡಿ ನಿಂಗರಡ್ಡಿ, ಸಿ.ಎಫ್ ಪಾಟೀಲ, ಪಿ.ಎಂ ಅಡ್ನೂರ್, ಬಿ.ಎಸ್ ನಾಗನಗೌಡರ ಶಾಲಾ ಸಿಬ್ಬಂದಿ ಹಾಗೂ ಬಿಸಿಯೂಟ ಸಿಬ್ಬಂದಿ ಹಾಜರಿದ್ದರು.

ಅಸುಂಡಿ, ಮೂಗನೂರು ಗ್ರಾಮಗಳಲ್ಲಿ ನವಣೆ ಬೆಳೆಯ ಕ್ಷೇತ್ರೋತ್ಸವ

## ನವಣೆ ತಪ್ಪಿಸುವುದು ಬವಣೆ



■ವಿಜಯಸಾಕ್ಷಿ ಸುದ್ದಿ, ಗದಗ

ನವಣೆ ಹಲವಾರು ಉತ್ತಮ ಪೋಷಕಾಂಶಗಳನ್ನ ಒಳಗೊಂಡಿರುವ ಸಿರಿಧಾನ್ಯ. ಅಂತಾರಾಷ್ಟ್ರೀಯ ಸಿರಿಧಾನ್ಯ ವರ್ಷ-2023ರ ಅಂಗವಾಗಿ ನವಣೆ ಬೆಳೆಯಲ್ಲಿ ಉತ್ತಮ ಇಳುವರಿ ಕೊಡುವ ಹಾಗೂ ಬರ ಸಹಿಷ್ಣುತೆ ತಳಿಯಾದ ಎಚ್.ಎನ್-46 ತಳಿಯನ್ನು ಮುಂಗಾರು ಹಂಗಾಮಿನಲ್ಲಿ ಗದಗ ತಾಲೂಕಿನ ಅಸುಂಡಿ ಹಾಗೂ ನರಗುಂದ ತಾಲೂಕಿನ ಮೂಗನೂರು ಗ್ರಾಮಗಳಲ್ಲಿ 2023-24ನೇ ಸಾಲಿನ ಪ್ರಾತ್ಯಕ್ಷಿಕೆಯನ್ನು ಕೈಗೊಳ್ಳಲಾಗಿತ್ತು.

ಇದರ ಅಂಗವಾಗಿ ಅಸುಂಡಿ ಗ್ರಾಮದ ಸುವರ್ಣ ಭೂಮಕ್ಕನವರ ಇವರ ಹೊಲದಲ್ಲಿ ಇತ್ತೀಚೆಗೆ ನವಣೆ ಬೆಳೆಯ ಕ್ಷೇತ್ರೋತ್ಸವವನ್ನು ಹಮ್ಮಿಕೊಳ್ಳಲಾಗಿತ್ತು. ಅಸುಂಡಿ ಗ್ರಾ.ಪಂ ಅಧ್ಯಕ್ಷ ತಾಜುದ್ದೀನ ಓಲೇಕಾರ ಮಾತನಾಡಿ, ಪ್ರತಿಯೊಬ್ಬರೂ ಹೆಚ್ಚು ಇಳುವರಿ ಕೊಡುವ ನವಣೆ ಬೆಳೆಯನ್ನು ಮುಂದಿನ ವರ್ಷ ಬೆಳೆದು, ದಿನನಿತ್ಯ ಸೇವಿಸಿರಿ ಎಂದು ತಿಳಿಸಿದರು.


ಪ್ರಗತಿಪರ ರೈತರಾದ ಸೋಮರಡ್ಡಿ ರಾಮೇನಹಳ್ಳಿ ಮಾತನಾಡಿ, ನಮ್ಮ ಹಿರಿಯರೆಲ್ಲರೂ ನಿತ್ಯ ನವಣೆ ಸೇವಿಸಿ ಉತ್ತಮ ಆರೋಗ್ಯವನ್ನು ಹೊಂದಿದ್ದರು. ಕಾರಣ, ದಿನನಿತ್ಯ ನವಣೆಯನ್ನು ಊಟ ಮಾಡಿರಿ ಎಂದು ತಿಳಿಸಿದರು.

ಪ್ರಭಾರಿ ಹಿರಿಯ ವಿಜ್ಞಾನಿ ಡಾ. ಸುಧಾ ಮಂಕಣಿ ಮಾತನಾಡಿ, ನವಣೆಯ ಪೋಷಕಾಂಶಗಳು ಹಾಗೂ ಅದರ ಬಳಕೆ ಮತ್ತು ವಿವಿಧ ಮೌಲ್ಯವರ್ಧಿತ ಪದಾರ್ಥಗಳ ಕುರಿತು ಮಾಹಿತಿಯನ್ನು ನೀಡಿದರು.

ಕೃಷಿ ಇಂಜಿನಿಯರಿಂಗ್ ವಿಜ್ಞಾನಿ ಡಾ. ವಿನಾಯಕ ನಿರಂಜನ ನವಣೆ ಸಂಸ್ಕರಣೆ ಹಾಗೂ ನವಣೆ ಸಂಸ್ಕರಣೆಯ ವಿವಿಧ ಯಂತ್ರೋಪಕರಣಗಳ ಕುರಿತು ಮಾಹಿತಿ ನೀಡಿದರು. ಸುವರ್ಣ ಭೂಮಕ್ಕನವರ ಮಾತನಾಡಿ, ದಿನನಿತ್ಯ ತಾವು ಉಪಯೋಗಿಸುತ್ತಿರುವ ಸಿರಿಧಾನ್ಯಗಳು ಹಾಗೂ ಅವುಗಳ ಬೇಸಾಯ ಕುರಿತು ತಿಳಿಸಿದರು. ನಂತರ ಪ್ರಾತ್ಯಕ್ಷಿಕೆಯ ತಾಕುಗಳಿಗೆ ಕ್ಷೇತ್ರ ಭೇಟ್ಟಿಯನ್ನು ಏರ್ಪಡಿಸಲಾಯಿತು.

ಕಾರ್ಯಕ್ರಮದಲ್ಲಿ ಕೇಂದ್ರದ ಹೇಮಾವತಿ ಹಿರೇಗೌಡರ, ತೋಟಗಾರಿಕೆ ತಜ್ಞರು, 55 ಜನ ರೈತರು, ರೈತ ಮಹಿಳೆಯರು, ಮಹಿಳಾ ಒಕ್ಕೂಟದ ಸಿಬ್ಬಂದಿ ಹಾಗೂ ಸದಸ್ಯರು ಭಾಗವಹಿಸಿದ್ದರು.

## ಅ.10ರಂದು ರಸ್ತೆ ತಡೆ ಚಳುವಳಿ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ರಸ್ತೆ ದುರಸ್ಥಿಗೆ ಆಗ್ರಹಿಸಿ ಅ.10ರ ಮಂಗಳವಾರ ಬಾಲೆಹೊಸೂರ ಗ್ರಾಮದಲ್ಲಿ ಗ್ರಾಮದ ರೈತರು, ವಿದ್ಯಾರ್ಥಿಗಳು, ವಿವಿಧ ಸಂಘಟನೆಗಳೊಡಗೂಡಿ ಪಕ್ಷಾತೀತವಾಗಿ ಪ್ರತಿಭಟನೆ ಮಾಡಲಾಗುತ್ತದೆ ಎಂದು ಬಾಲೆಹೊಸೂರು ಗ್ರಾಮಾಭಿವೃದ್ಧಿ ಹೋರಾಟ ಸಮಿತಿ ಅಧ್ಯಕ್ಷ ಬಸವರೆಡ್ಡಿ ಹನಮರೆಡ್ಡಿ ತಿಳಿಸಿದ್ದಾರೆ.

ಈ ಬಗ್ಗೆ ಪತ್ರಿಕಾ ಹೇಳಿಕೆ ನೀಡಿರುವ ಅವರು, ಬಾಲೆಹೊಸೂರಿನಿಂದ ಸೂರಣಗಿ, ಹಾಲಗಿ, ತಂಗೋಡ, ಇಚ್ಚಂಗಿ ಮಾದಾಪುರ ಸಂಪರ್ಕಿಸುವ ರಸ್ತೆಗಳು ಸಂಪೂರ್ಣ ತಗ್ಗು-ಗುಂಡಿಗಳು ಬಿದ್ದು ಸಂಚಾರ ಸಂಪೂರ್ಣ ಅಸ್ತವ್ಯಸ್ಥಗೊಂಡು ವರ್ಷಗಳೇ ಕಳೆದಿವೆ. 15 ದಿನದೊಳಗೆ ರಸ್ತೆ ದುರಸ್ತಿ ಕಾಮಗಾರಿ ಕೈಗೊಳ್ಳದಿದ್ದರೆ ಸಂಚಾರ ಬಂದ್ ಮಾಡಿ, ರಸ್ತಾ ರೋಖೋ ಚಳುವಳಿ ಹಮ್ಮಿಕೊಳ್ಳುತ್ತೇವೆಂದು ಸಲ್ಲಿಸಿದ ಮನವಿಗೆ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳಿಂದ ಕಿಂಚಿತ್ತೂ ಸ್ಪಂದನೆಯಿಲ್ಲ. ಕಾರಣ ಅ.10ರಂದು ಗ್ರಾಮದಲ್ಲಿ ಸಂಪೂರ್ಣ ವಾಹನ ಸಂಚಾರ ಬಂದ್ ಮಾಡಿ, ಚಳುವಳಿಯನ್ನು ಹಮ್ಮಿಕೊಳ್ಳುತ್ತೇವೆಂದು ಪುನರುಚ್ಚರಿಸಿದ್ದಾರೆ.

## ಸಹಕಾರಿ ಸಂಘಗಳ ಅಭಿವೃದ್ಧಿಗೆ ಸದಸ್ಯರ ಸಹಕಾರ ಅಗತ್ಯ



■ವಿಜಯಸಾಕ್ಷಿ ಸುದ್ದಿ, ಮುಳಗುಂದ

ಸಹಕಾರಿ ಸಂಘಗಳು ಅಭಿವೃದ್ಧಿ ಹೊಂದಲು ಸರ್ವ ಸದಸ್ಯರ ಸಹಕಾರ ಅಗತ್ಯವಿದೆ ಎಂದು ಶಿಕ್ಷಕರ ಸಂಘದ ಅಧ್ಯಕ್ಷ ಎಸ್. ಆರ್ ಬಂಡಿ ಹೇಳಿದರು.

ಅವರು ಪಟ್ಟಣದ ಮುಳಗುಂದ ವಿಭಾಗದ ಪ್ರಾಥಮಿಕ ಶಿಕ್ಷಕ-ಶಿಕ್ಷಕಿಯರ ಪತ್ತು ಬೆಳೆಸುವ ಸಹಕಾರಿ ಸಂಘ ನಿಯಮಿತದ 51ನೇ ವಾರ್ಷಿಕ ಸರ್ವ ಸಾಧಾರಣ ಸಭೆಯಲ್ಲಿ ಏಷಿಯಾ ಖಂಡದ ಪ್ರಥಮ ಸಹಕಾರಿ ಸಂಘದ ಪಿತಾಮಹ ಶಿದ್ದನಗೌಡ ಪಾಟೀಲ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ನಿವೃತ್ತ ಶಿಕ್ಷಕರನ್ನು ಸನ್ಮಾನಿಸಿ ಮಾತನಾಡಿದರು. 50 ವರ್ಷದ ಹಿಂದೆ ಶಿಕ್ಷಕರು ಕಟ್ಟಿ ಬೆಳೆಸಿದ ಈ ಸಂಘ ಅಭಿವೃದ್ಧಿ ಪಥದತ್ತ ಸಾಗಿ ಬಂದಿದೆ. ಸಹಕಾರಿ ಸಂಘಗಳಿಗೆ ಸಹಕಾರ ನೀಡಿದಲ್ಲಿ ನಮ್ಮ ಮುಂದಿನ ಭವಿಷ್ಯಕ್ಕೆ ಸಹಕಾರಿಯಾಗುತ್ತದೆ, ಸಂಘವೂ ಬೆಳೆಯುತ್ತದೆ ಎಂದರು.

ನಿವೃತ್ತ ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಆರ್ ಹೂಗಾರ, ಗದಗ ಗ್ರಾಮೀಣ ಕ್ಷೇತ್ರ ಶಿಕ್ಷಣಾಧಿಕಾರಿ ವಿ.ವಿ ನಡುವಿನಮನಿ, ಸಂಘದ ಅಧ್ಯಕ್ಷ ಆನಂದ ಗೋಟೂರ, ವಿ.ಎಂ ಹಿರೇಮಠ, ಎನ್.ಎಸ್ ಪಾಟೀಲ್, ಪಿ.ಬಿ ಮುಧೋಳಮಠ, ಬಿ.ಬಿ ಹಡಪದ, ದತ್ತಾತ್ರೇಯ ದೀಕ್ಷಿತ, ರಾಜು ಬದಾಮಿ, ಎಂ.ಎಂ ಮೆಗಲಮನಿ, ಎಸ್.ಬಿ ಅಮಾಗಿ, ಪಿ.ಎಸ್ ಮರಿದೇವರಮಠ, ರತ್ನಾ ಬದಿ ಹಾಗೂ ಸಹಕಾರಿ ಸಂಘದ ಸರ್ವ ಸದಸ್ಯರು ಇದ್ದರು.

## ಸಾರಿಗೆ ಇಲಾಖೆಗೆ ಪಲ್ಲಕ್ಕಿ ಬಸ್ ಸೇರ್ಪಡೆ

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಸಾರಿಗೆ ಇಲಾಖೆಗೆ ಮತ್ತೊಂದು ಹಿರಿಮೆ ಬಂದಿದ್ದು, ಕೆಎಸ್‌ಆರ್‌ಟಿಸಿಗೆ ಪಲ್ಲಕ್ಕಿ ಬಸ್ ಸೇರ್ಪಡೆಯಾಗಲಿದೆ. ಹೈಲುಕ್ ಇರುವ ನಾನ್ ಎಸಿ ಲಕ್ಸುರಿ ಬಸ್‌ಗೆ ಸಿಎಂ ಸಿದ್ದರಾಮಯ್ಯ ಚಾಲನೆ ನೀಡಲಿದ್ದಾರೆ. ದೇಶದಲ್ಲೇ ಅತ್ಯುತ್ತಮ ಸಾರಿಗೆ ಸೇವೆ ನೀಡುತ್ತಿರುವ ಕೆಎಸ್ ಆರ್‌ಟಿಸಿ 40 ಹೊಸ ಬಸ್‌ಗಳನ್ನು ರಸ್ತೆಗಿಳಿಸಲು ಸಜ್ಜಾಗಿದೆ.

'ಪಲ್ಲಕ್ಕಿ' ಹೆಸರಿನ 40 ನಾನ್ ಎಸಿ ಸ್ಲೀಪರ್ ಬಸ್‌ಗಳು ರಾಜ್ಯದ ವಿವಿಧೆಡೆ ಸಂಚರಿಸಲಿವೆ. 'ಸಂತೋಷವು ಪ್ರಯಾಣಿಸುತ್ತಿದೆ' ಎನ್ನುವ ಟ್ಯಾಗ್ ಲೈನ್‌ನೊಂದಿಗೆ ಸಾರಿಗೆ ನಿಗಮದ ಪಲ್ಲಕ್ಕಿ ರಸ್ತೆಗಿಳಿಯಲು ಸಜ್ಜಾಗಿದ್ದು, ಈ ಬಸ್‌ಗಳು ಯಾವುದೇ ಐಷಾರಾಮಿ ಬಸ್‌ಗಳಿಗೆ ಕಡಿಮೆ ಇಲ್ಲ. ಪಲ್ಲಕ್ಕಿ ಹೆಸರಿನ 40 ಬಸ್‌ಗಳ ಜೊತೆಗೆ ಒಟ್ಟು 100 ನೂತನ್ ಬಸ್‌ಗಳಿಗೆ ಸಿಎಂ ಹಸಿರು ನಿಶಾನೆ ತೋರಿಸಲಿದ್ದಾರೆ. ಪಲ್ಲಕ್ಕಿ ಬಸ್ 40 ಆಸನಗಳನ್ನು ಹೊಂದಿದೆ.



ಪ್ರೌಢಶಾಲಾ ವಿದ್ಯಾರ್ಥಿಗಳ ವಿಭಾಗ ಮಟ್ಟದ ವಿಜ್ಞಾನ ನಾಟಕ ಸ್ಪರ್ಧೆ ಉದ್ಘಾಟಿಸಿದ ಬಾರಾಟಕ್ಕೆ

# ವಿಜ್ಞಾನ, ತಂತ್ರಜ್ಞಾನ ಸದ್ಬಳಕೆಯಾಗಲಿ



■ವಿಜಯಸಾಕ್ಷಿ ಸುದ್ದಿ, ಗದಗ

ವಿದ್ಯಾರ್ಥಿಗಳು ಪಠ್ಯದೊಂದಿಗೆ ಪಠ್ಯೇತರ ಹಾಗೂ ಸೃಜನಶೀಲ ಚಟುವಟಿಕೆಗಳಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳಬೇಕು ಎಂದು ಗದಗ ಡಯಟ್ ಉಪನಿರ್ದೇಶಕ ಜಿ.ಎಲ್.ಬಾರಾಟಕ್ಕೆ ಅಭಿಪ್ರಾಯಪಟ್ಟರು.

ಅವರು ಶನಿವಾರ ನಗರದ ಕನಕ ಭವನದಲ್ಲಿ ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ ಬೆಂಗಳೂರು, ಗದಗ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಶಾಲಾ ಶಿಕ್ಷಣ ಇಲಾಖೆ ಗದಗ ಆಶ್ರಯದಲ್ಲಿ ನಡೆದ 2023-24ನೇ ಸಾಲಿನ ಪ್ರೌಢಶಾಲಾ ವಿದ್ಯಾರ್ಥಿಗಳ ವಿಭಾಗ ಮಟ್ಟದ ವಿಜ್ಞಾನ ನಾಟಕ ಸ್ಪರ್ಧೆ ಉದ್ಘಾಟಿಸಿ ಮಾತನಾಡಿದರು.

ಆಧುನಿಕತೆಯ ಇಂದಿನ ದಿನಮಾನಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಸಾಕಷ್ಟು ಅಭಿವೃದ್ಧಿ ಹೊಂದಿದ್ದು, ಈ ಸೌಲಭ್ಯ ಮತ್ತು ಜ್ಞಾನವನ್ನು ಸದ್ಬಳಕೆ ಮಾಡಿಕೊಂಡು ವೈಯುಕ್ತಿಕ ಹಾಗೂ ಸಾಮಾಜಿಕ ಸಾಧನೆಗೆ ಉಪಯೋಗಿಸಿಕೊಂಡು ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ಉನ್ನತ ಸ್ಥಾನಕ್ಕೇರಬೇಕೆಂದರು.

ವಿಜ್ಞಾನದ ತಳಹದಿಯ ಮೇಲೆ ನಾಟಕ ಪ್ರದರ್ಶನ ಮಾಡುವ ಮೂಲಕ ಸಮಾಜಕ್ಕೆ ಒಂದು ಒಳ್ಳೆಯ ಸಂದೇಶ ನೀಡುವ ಪರಿಕಲ್ಪನೆಯುಳ್ಳ ವಿಜ್ಞಾನ ನಾಟಕಗಳು ಹೆಚ್ಚು ಹೆಚ್ಚು ಪ್ರದರ್ಶನಗೊಂಡು ಸಮಾಜದಲ್ಲಿ ಅಮೂಲಾಗ್ರ ಬದಲಾವಣೆಗೆ ಸಂದೇಶ ರವಾನೆಯಾಗಲಿ ಎಂದರು.

ಮುಖ್ಯ ಅತಿಥಿ ಗದಗ ಶಹರ ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಎಸ್.ಬುರಡಿ ಮಾತನಾಡಿ, ವಿಜ್ಞಾನದ ಮೂಲಕ ಜಾಗೃತಿ, ಮಾಹಿತಿ ಹಂಚುವಿಕೆ, ವಿಜ್ಞಾನದ ಸಾಧನೆಯನ್ನು ರಂಗಸಜ್ಜಿಕೆಯಲ್ಲಿ ಅಭಿವ್ಯಕ್ತಗೊಳಿಸಲು ಹೊರಟಿರುವ ವಿದ್ಯಾರ್ಥಿಗಳ ಸಾಹಸದ ಪ್ರಯತ್ನವನ್ನು ಅಭಿನಂದಿಸಬೇಕು.

ಪರಿಸರ ಕಾಳಜಿ, ನೈಸರ್ಗಿಕ ಸಂಪನ್ಮೂಲಗಳ ಕ್ರೂಢೀಕರಣ ಮತ್ತು ಸದ್ಬಳಕೆ ಆಗುವಂತೆ ತಿಳುವಳಿಕೆ ನೀಡುವ ಯತ್ನ ಇಲ್ಲಿ ನಡೆದಿದ್ದು ವಿಜ್ಞಾನವು ಪ್ರಗತಿ ಮತ್ತು ಸಾಧನೆಗೆ ಸದ್ಬಳಕೆ ಆಗಲಿ ಎಂದರು.

ಅತಿಥಿಗಳಾಗಿ ಆಗಮಿಸಿದ್ದ ಕ.ರಾ.ಪ್ರೌ.ಶಾ.ಸ.ಶಿ ಸಂಘ ಗದಗ ಜಿಲ್ಲಾ ಅಧ್ಯಕ್ಷ ಪಿ.ಎಚ್. ಕಡಿವಾಲ, ಗ್ರಾಮೀಣ ಘಟಕದ ಅಧ್ಯಕ್ಷ ಬಿ.ಎಫ್.ಪೂಜಾರ ಮಾತನಾಡಿ, ರಂಗಭೂಮಿಗೆ ಹೆಸರಾಗಿರುವ ಗದುಗಿನಲ್ಲಿ ವಿಭಾಗ ಮಟ್ಟದ ವಿಜ್ಞಾನ ನಾಟಕ ಸ್ಪರ್ಧೆಯನ್ನು ಏರ್ಪಡಿಸಿರುವದು ಅಭಿನಂದನೀಯ. ವಿದ್ಯಾರ್ಥಿಗಳಲ್ಲಿ ವಿಜ್ಞಾನ ವಿಷಯವನ್ನು ಮನನ ಮಾಡಿಕೊಳ್ಳುವ ಹಾಗೂ ಅಭಿನಯ ಕಲೆಯನ್ನು ಕರಗತ ಮಾಡಿಕೊಳ್ಳಲು ಇದೊಂದು ವೇದಿಕೆಯಾಗಿದ್ದು, ಕಲಿಕಾ ಕಲೆಯನ್ನು, ಜ್ಞಾನದ ದಿಗಂತವನ್ನು ಹೆಚ್ಚಿಸಲು ಇಂತಹ ಸ್ಪರ್ಧೆಗಳು ನಡೆಯಬೇಕು ಎಂದರು.

ವೇದಿಕೆಯ ಮೇಲೆ ಹಿರಿಯ ಉಪನ್ಯಾಸಕರಾದ ಮಂಗಲಾ ತಾಪಸ್ಕರ್, ಎಚ್.ಬಿ.ರಡ್ಡೇರ, ಗಾಯತ್ರಿ ಸಜ್ಜನ, ಎಂ.ಎಂ.ಕರ್ಜಗಿ, ಜಿ.ಡಿ.ದಾಸರ, ಬಿ.ಎಂ.ಶಿವಪೂರ, ಶ್ರೀಮತಿ ಕೆ.ಎಸ್.ಹೂಲಗೇರಿ, ಶಂಕರ ಹಡಗಲಿ ಅಲ್ಲದೆ ಗದುಗಿನ ಎಂ.ಜಿ.ಚಾರಿಟೇಬಲ್ ಟ್ರಸ್ಟ್‌ನ ಕಾರ್ಯದರ್ಶಿ ಅಬ್ದುಲ್‌ಗಫೂರಸಾಬ ಪಲ್ಲೇದ, ನಿರ್ಣಾಯಕರಾಗಿ ಆಗಮಿಸಿದ್ದ ಎಸ್.ಐ.ದಿಂಡೂರ, ಆರ್.ಕೆ.ಮೋನೆ, ನಿಂ.ಗು.ಸೊಲಗಿ ಉಪಸ್ಥಿತರಿದ್ದರು.

ಪ್ರಾರಂಭದಲ್ಲಿ ವಿದ್ಯಾರ್ಥಿನಿಯರು ಪ್ರಾರ್ಥಿಸಿದರು, ಎಚ್.ಬಿ.ರಡ್ಡೇರ ಸ್ವಾಗತಿಸಿದರು. ನೋಡಲ್ ಅಧಿಕಾರಿ ಜಿ.ಡಿ.ದಾಸರ ಪ್ರಾಸ್ತಾವಿಕವಾಗಿ ಮಾತನಾಡಿದರು, ಎಂ.ಎ.ಯರಗುಡಿ ನಿರೂಪಿಸಿ ವಂದಿಸಿದರು. ಸಮಾರಂಭದಲ್ಲಿ ವಿಜಯ ಕಿರೇಸೂರ, ಎನ್.ಬಿ.ಚಿತ್ರಗಾರ, ರವಿ ಹೆಬ್ಬಳ್ಳಿ, ಗಿರೀಶ ನರಗುಂದ, ಲಕ್ಷ್ಮಣ ಯಡಿಮಾಪೂರ, ಬಿ.ವೈ. ಡೊಳ್ಳಿನ, ಶ್ರೀಮತಿ ಟಿ.ಎಸ್.ಹೂಗಾರ, ಎಚ್.ಬಿ.ಬಾಕಳೆ, ಡಿ.ಕೆ.ಹೂಗಾರ, ಎನ್.ಎಸ್.ಬಿರಾದಾರ, ಪ್ರಕಾಶ ಮಂಗಳೂರ ಉಪಸ್ಥಿತರಿದ್ದರು.

### ರಾಜ್ಯಮಟ್ಟಕ್ಕೆ ಆಯ್ಕೆ

ಪ್ರೌಢಶಾಲಾ ವಿದ್ಯಾರ್ಥಿಗಳ ವಿಭಾಗ ಮಟ್ಟದ ವಿಜ್ಞಾನ ನಾಟಕ ಸ್ಪರ್ಧೆಯಲ್ಲಿ ಶಿರಸಿ, ಕುಮಟಾ, ಚಿಕ್ಕೋಡಿ, ಬೆಳಗಾವಿ, ಧಾರವಾಡ ಮತ್ತು ಗದಗ ಜಿಲ್ಲೆಯಿಂದ ತಲಾ ಒಂದು ತಂಡ ಸೇರಿ 47 ವಿದ್ಯಾರ್ಥಿಗಳು 6 ಜನ ಶಿಕ್ಷಕ/ ಶಿಕ್ಷಕಿಯರು ಪಾಲ್ಗೊಂಡಿದ್ದರು. ಸ್ಪರ್ಧೆಯಲ್ಲಿ ಶಿರಸಿ ಜಿಲ್ಲೆಯ ಬೈರುಂಬೆಯ ಶ್ರೀ ಶಾರದಾಂಬಾ ಆಂಗ್ಲ ಮಾಧ್ಯಮ ಪ್ರೌಢಶಾಲೆ ಪ್ರಥಮ, ಬೆಳಗಾವಿಯ ಸ್ವಾಧ್ಯಾಯ ವಿದ್ಯಾ ಮಂದಿರದ ಪ್ರೌಢಶಾಲೆಯು ದ್ವಿತೀಯ ಹಾಗೂ ಗದಗ ಜಿಲ್ಲೆಯ ನೀರಲಗಿ ಗ್ರಾಮದ ಸರಕಾರಿ ಪ್ರೌಢಶಾಲೆಯು ತೃತೀಯ ಸ್ಥಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಗೊಂಡಿವೆ.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka